॥ ಶ್ರೀ ಗುರುಭ್ಯೋ ನಮಃ ಹರಿಃ ಓಂ ॥

ನಾರಾಯಣಂ ಗುಣೈಸ್ಸರ್ವೈರುದೀರ್ಣಂ ದೋಷವರ್ಜಿತಮ್ ।
ಜ್ಞೇಯಂ ಗಮ್ಯಂ ಗುರೂಂಶ್ಚಾಪಿ ನತ್ವಾ ಸೂತ್ರಾರ್ಥ ಉಚ್ಯತೇ॥
ಶುದ್ಧಾನಂದೋರುಸಂವಿದ್ಯುತಿಬಲಬಹುಲೌದಾರ್ಯವೀರ್ಯಾದಿ ದೇಹಂ।
ಚಿಂತಾಸಂತಾಪಲೇಪೋದ್ಭವಮುಖರಾಶೇಷ ದೋಷಾತಿದೂರಂ॥
ಸದ್ಭಿರ್ವೈರಾಗ್ಯಭಕ್ತಿಶ್ರುತಿಮತಿನಿಯತಧ್ಯಾನಜಜ್ಞಾನಯೋಗಾದ್ಗಮ್ಯಂ।
ವಂದೇ ಮುಕುಂದಾಭಿದಮಮಲಮಲಂ ಬ್ರಹ್ಮ ವೇದಾಂತ ಗಮ್ಯಮ್॥
ನರಸಿಂಹೋಽಖಿಲಾಜ್ಞಾನಮತಧ್ವಾಂತ ದಿವಾಕರಃ।
ಜಯತ್ಯಮಿತಸದ್‌ಜ್ಞಾನಸುಖಶಕ್ತಿ ಪಯೋನಿಧಿಃ॥
ಪ್ರಹ್ಲಾದಾಹ್ಲಾದಕಂ ಲಕ್ಷ್ಮೀನೃಸಿಂಹಂ ಭಕ್ತವತ್ಸಲಮ್।
ದೈತ್ಯಮತ್ತೇಭ ದಮನಂ ಶ್ರೀನಿವಾಸಂ ಭಜೇಽನಿಶಮ್॥
ಅಭ್ರಮಂ ಭಂಗರಹಿತಮಜಡಂ ವಿಮಲಂ ಸದಾ।
ಆನಂದತೀರ್ಥಮತುಲಂ ಭಜೇ ತಾಪತ್ರಯಾಪಹಮ್॥
ಚಿತ್ರೈಃ ಪದೈಶ್ಚ ಗಂಭೀರೈರ್ವಾಕ್ಯೈರ್ಮಾನೈರಖಂಡಿತೈಃ ।
ಗುರುಭಾವಂ ವ್ಯಂಜಯಂತೀ ಭಾತಿ ಶ್ರೀಜಯತೀರ್ಥ ವಾಕ್॥
ಯಸ್ಯ ವಾಕ್ ಕಾಮಧೇನುರ್ನಃ ಕಾಮಿತಾರ್ಥಾನ್ ಪ್ರಯಚ್ಛತಿ ।
ಸೇವೇ ತಂ ಜಯಯೋಗೀಂದ್ರಂ ಕಾಮಬಾಣಛಿದಂ ಸದಾ॥
ಅರ್ಥಿಕಲ್ಪಿತಕಲ್ಪೋಽಯಂ ಪ್ರತ್ಯರ್ಥಿಗಜಕೇಸರೀ ।
ವ್ಯಾಸತೀರ್ಥಗುರುರ್ಭೂಯಾದಸ್ಮದಿಷ್ಟಾರ್ಥ ಸಿದ್ಧಯೇ॥
ವ್ಯಾಸರಾಜೇಂದುಮಾಶಾಸೇ ಚಂದ್ರಿಕಾ ಯಸ್ಯ ಸಮ್ಮತಾ ।
ದುರ್ವಾದಿ ಚೋರಾನ್ ವಿದ್ರಾವ್ಯ ರಕ್ಷಿತಂ ಭುವನತ್ರಯಮ್॥
ಮೂಕೋಽಪಿ ಯತ್ಪ್ರಸಾದೇನ ಮುಕುಂದ ಶಯನಾಯತೇ ।
ರಾಜರಾಜಾಯತೇ ರಿಕ್ತೋ ರಾಘವೇಂದ್ರಂ ತಮಾಶ್ರಯೇ॥
ಆಪಾದಮೌಳಿಪರ್ಯಂತಂ ಗುರೂಣಾಮಾಕೃತಿಂ ಸ್ಮರೇತ್ ।
ತೇನ ವಿಘ್ನಾಃ ಪ್ರಣಶ್ಯಂತಿ ಸಿಧ್ಯಂತಿ ಚ ಮನೋರಥಾಃ ॥
ಗಂಗಾಸಂಗೇನ ನೈರ್ಮಲ್ಯಂ ರಥ್ಯಾದ್ಭಿರ್ಲಭ್ಯತೇ ಯಥಾ ।
ವಾಚೋ ವಿಶುದ್ಧಿ ಸಿದ್ಧ್ಯರ್ಥಂ ಸಂಗಮ್ಯಂತೇ ಗುರೋರ್ಗಿರಃ ॥

ಇಹ ಖಲು ಅಧಿಕಾರಿಣಾಂ ಅಖಿಲಕ್ಲೇಶನಿವೃತ್ತಿವಿಶಿಷ್ಟ ಪರಮಾನಂದಾವಾಪ್ತಿ ನಿದಾನ ಭಗವದ್ ಜ್ಞಾನಾಯ ಪ್ರವೃತ್ತಾನಾಂ ಅನಂತಾಮ್ನಾಯಾನಾಂ ಇತಿಕರ್ತವ್ಯತಾರೂಪಾಣಿ ನಾರಾಯಣಾವತಾರ ಬಾದರಾಯಣ ಕೃತಾನಿ ಬ್ರಹ್ಮಸೂತ್ರಾಣಿ ಅನ್ಯೈ ಅನ್ಯಥಾವ್ಯಾಖ್ಯಾತಾನಿ ಅಕೃತಪ್ರಾಯಾಣಿ ಮನ್ವಾನೋ ಭಗವಾನ್ ಆನಂದತೀರ್ಥಮುನಿಃ ಯಥಾವತ್ ವ್ಯಾಚಿಖ್ಯಾಸುಃ ಅಧ್ಯಾಯ ಚತುಷ್ಟಯೋಕ್ತ ಗುಣವಿಶಿಷ್ಟ ಇಷ್ಟದೇವತಾ ಗುರುನತಿಪೂರ್ವಂ ಚಿಕೀರ್ಷಿತಂ ಪ್ರತಿಜಾನೀತೇ  ಓಂ ನಾರಾಯಣಂ ಇತಿ ॥

ಈ ಜಗತ್ತಿನಲ್ಲಿ ಅಧಿಕಾರಿಗಳಾದ ಜೀವರಿಗೆ ಅಖಿಲ ದುಃಖನಿವೃತ್ತಿಪೂರ್ವಕ ಮೋಕ್ಷಕ್ಕೆ ಕಾರಣವಾದ ಭಗವಂತನಾದ ನಾರಾಯಣನ ಜ್ಞಾನಕ್ಕೆ ಕಾರಣವಾದ ಅನಂತ ವೇದಗಳ ಅರ್ಥನಿರ್ಣಾಯಕವಾದ, ನಾರಾಯಣಾವತಾರಿಯೇ ಆದ ವೇದವ್ಯಾಸದೇವರಿಂದ ರಚಿತವಾದ ಬ್ರಹ್ಮಸೂತ್ರಗಳಿಗೆ ಅನ್ಯರಿಂದ, ಪರಮಾತ್ಮನ ಅಭಿಃಪ್ರಾಯಕ್ಕೆ ವಿರುದ್ಧವಾಗಿ ವ್ಯಾಖ್ಯಾನಮಾಡಲ್ಪಟ್ಟಿದ್ದರೂ ವ್ಯಾಖ್ಯಾನಮಾಡದಂತಾಗಿರುವುದರಿಂದ, ಶ್ರೀಮನ್ ಮಧ್ವಾಚಾರ್ಯರು ಸೂತ್ರಗಳ ಅರ್ಥವನ್ನು ಯಥಾವತ್ತಾವತ್ತಾಗಿ ವ್ಯಾಖ್ಯಾನಮಾಡಲು ಉದ್ದೇಶಮಾಡಿದವರಾಗಿ ನಾಲಕ್ಕು ಅಧ್ಯಾಯಗಳಲ್ಲಿ ಉಕ್ತವಾದ ಗುಣಗಳಿಂದ ಪೂರ್ಣನಾದ ಇಷ್ಟದೇವತೆಯೂ ಗುರುವೂ ಆದ ನಾರಾಯಣನನ್ನು ನಮಸ್ಕರಿಸುತ್ತಾ "ನಾರಾಯಣಂ" ಎಂದು ಮಂಗಳಾಚರಣೆಯನ್ನು ಮಾಡುವವರಾಗಿದ್ದಾರೆ.

ಓಂ ನಾರಾಯಣಂ ಗುಣೈಸ್ಸರ್ವೈರುದೀರ್ಣಂ ದೋಷವರ್ಜಿತಂ।
ಜ್ಞೇಯಂ ಗಮ್ಯಂ ಗುರೂಂಶ್ಚಾಪಿ ನತ್ವಾ ಸೂತ್ರಾರ್ಥ ಉಚ್ಯತೇ ॥

ಸರ್ವೈಃ ಆನಂದಜ್ಞಾನದ್ಯುತಿಬಲೌದಾರ್ಯವೀರ್ಯಾದಿಭಿಃ ಗುಣೈಃ ಪರಿಪೂರ್ಣಂ । ಚಿಂತಾಸಂತಾಪ ಪುಣ್ಯಾಪಾಪಲೇಪ ಜನಿಮೃತಿಪ್ರಭೃತಿದೋಷವರ್ಜಿತಂ । ಸದ್ಭಿಃ ವೈರಾಗ್ಯಭಕ್ತಿಶ್ರವಣಮನನಧ್ಯಾನಜನ್ಯ ಅಪರೋಕ್ಷಜ್ಞಾನೇನ ವಿಷಯೀ ಕರ್ತವ್ಯಂ । ಅತ ಏವ ಜ್ಞಾನರೂಪ ಉಪಾಯಾತ್ ಸದ್ಭಿಃ ಪ್ರಾಪ್ಯಮಪಿ ನಾರಾಯಣಂ ನತ್ವಾ ಇತಿ ವಿಶೇಷಣ ಸಮುಚ್ಚಯೇ ಅಪಿ ಶಬ್ದಃ । ತೇನ ವಿಶಿಷ್ಟಸ್ಯೈವ ಜ್ಞೇಯತ್ವಲಾಭಾತ್ ವಿಶಿಷ್ಟಂ ಮಂದೋಪಾಸ್ಯಂ ಶುದ್ಧಂ ಮುಮುಕ್ಷು ಜ್ಞೇಯಂ ಇತಿ ಪ್ರತ್ಯುಕ್ತಂ । ಗುರೂಂಶ್ಚ ನತ್ವಾ ಇತಿ ಗುರುದೇವತಾನತಿ ಸಮುಚ್ಚಯೇ ಚ ಶಬ್ದಃ । ಯದ್ವಾ ಟೀಕಾರೀತ್ಯಾ ಗುರುದೇವತಾ ಭೇದೇ ಅರುಚಿ ಸೂಚಕೋ ಅಪಿ ಶಬ್ದಃ । ಗುರುತ್ವಾತ್ ಬಹುವಚನಂ ಉಕ್ತಂ ಚ ಗೀತಾಭಾಷ್ಯವ್ಯಾಖ್ಯಾನೇ ಬಹುವಚನಂ ಗೌರವಾದೇವ ಇತಿ । ತಮೇವ ಶಾಸ್ತ್ರಪ್ರಭವಂ

ಇತ್ಯಾದಿಭಿಃ ಪ್ರಕಾರೈಃ ಯತ್ ಗುರುತ್ವೋಪಪಾದನಂ ತೇನ ಗುರೂಂಶ್ಚ ಇತಿ ಬಹುವಚನಾಂತಂ ಪದಂ ವಿವೃತಂ ಇತಿ ಸುಧಾಶಯಂ ವಾ ॥

ಸರ್ವೈಃ ಗುಣೈಃ ಎಂದರೆ ಆನಂದಜ್ಞಾನಪ್ರಕಾಶಬಲಔದಾರ್ಯ ಮೊದಲಾದ ಗುಣಪೂರ್ಣನಾದ, ಚಿಂತೆ ದುಃಖ ಪುಣ್ಯಾಪಾಪಗಳಲೇಪ ಹುಟ್ಟುಸಾವು ಮೊದಲಾದ ದೋಷ ರಹಿತನಾದ, ವೈರಾಗ್ಯದಿಂದೊಡಗೂಡಿದ ಭಕ್ತಿಯುತರಾದ ಸಜ್ಜನರಿಂದ ಶ್ರವಣಮನನ ನಿಧಿಧ್ಯಾಸನ ಜನ್ಯವಾದ ಅಪರೋಕ್ಷಜ್ಞಾನಕ್ಕೆ ವಿಷಯನಾದ, ಅಂದರೆ ಜ್ಞಾನರೂಪವಾದ ಉಪಾಯದಿಂದ ಹೊಂದಲ್ಪಡುವ ನಾರಾಯಣನ್ನು ನಮಸ್ಕಾರಮಾಡುತ್ತಾ ಬ್ರಹ್ಮಸೂತ್ರಾರ್ಥವು ಹೇಳಲ್ಪಡುತ್ತದೆ.. “ಅಪಿ” ಶಬ್ದವು ವಿಶೇಷಣಗಳನ್ನು ಒಟ್ಟುಗೂಡಿಸುತ್ತದೆ. ಗುಣಪೂರ್ಣನಾದ ನಾರಾಯಣ ಎಂದು ಹೇಳಿದ್ದರಿಂದ, ಸಗುಣಬ್ರಹ್ಮ ಅಜ್ಞಾನಿಗಳಿಂದ ಉಪಾಸ್ಯ ಶುದ್ಧಬ್ರಹ್ಮ ಮುಮುಕ್ಷುಗಳಿಂದ ಉಪಾಸ್ಯ ಎನ್ನುವುದು ಸರಿಯಲ್ಲ ಎಂದು ಹೇಳಿದಂತೆ ಆಯಿತು. “ಗುರೂಂಶ್ಚ ನತ್ವಾ” ಎಂದು ಹೇಳಿದ್ದರಿಂದ ಗುರುಗಳ ಮತ್ತು ದೇವರ ನಮಸ್ಕಾರವನ್ನೂ ಮಾಡಿ ಎಂದು ಅರ್ಥವಾಗುತ್ತದೆ. ಅಥವಾ ತತ್ವಪ್ರಕಾಶಿಕಾದಲ್ಲಿ ಶ್ರೀಜಯತೀರ್ಥರ ಉಕ್ತಿಯಂತೆ ಶ್ರೀಮದಾಚಾರ್ಯರಿಗೆ ಗುರುಗಳು ಮತ್ತು ದೇವರು ಬೇರೆ ಬೇರೆಯಲ್ಲ ಎಂದು ತಿಳಿಸುವುದಕ್ಕೆ “ಅಪಿ” ಶಬ್ದವನ್ನು ಪ್ರಯೋಗಿಸಿದ್ದಾರೆ ಅಥವಾ ಗೀತಾಭಾಷ್ಯವ್ಯಾಖ್ಯನದಲ್ಲಿ ಹೇಳಿದಂತೆ “ಗುರೂನ್” ಎಂಬ ಬಹುವಚನ ಪ್ರಯೋಗ ಗೌರವಾರ್ಥವಾಗಿ ಅಥವಾ ಸುಧಾದಲ್ಲಿ ಹೇಳಿರುವಂತೆ “ತಮೇವ ಶಾಸ್ತ್ರ ಪ್ರಭವಂ” ಮುಂತಾದ ಅನುವ್ಯಾಖ್ಯಾನೋಕ್ತಿಯಂತೆ ಬಹುಪ್ರಕಾರವಾದ ಗುರುತ್ವ ದ್ಯೋತಕ ಎಂದಾಗಲಿ ತಿಳಿಯಬಹುದು.

ಅತ್ರ ನಾರಾಯಣಮಿತ್ಯುಕ್ತ್ಯೈವ ಆನಂದ ಚಿದಾತ್ಮಕದೇಹಂ ಇತಿ ಲಾಭಾತ್ ದೇಹಸತ್ವೇ ದೋಷವರ್ಜಿತಂ ಇತಿ ಅಯುಕ್ತಂ ತದಸತ್ವೇ ಜ್ಞಾನಾದಿ ಗುಣೋದೀರ್ಣತಾ ನ ಯುಕ್ತಾ ಇತಿ ನಿರಸ್ತಂ.

ಇಲ್ಲಿ “ನಾರಾಯಣಂ” ಎಂದು ಹೇಳಿದ್ದರಿಂದಲೇ ಜ್ಞಾನಾನಂದಾತ್ಮಕವಾದ ದೇಹವುಳ್ಳವನೆಂದು ತಿಳಿಯುವುದರಿಂದ ದೇಹವಿದ್ದರೆ ದೋಷವರ್ಜಿತ ಎನ್ನುವುದು ಸರಿಯಾಗುವುದಿಲ್ಲ ಮತ್ತು ದೇಹವಿಲ್ಲದಿದ್ದರೆ ಜ್ಞಾನಾದಿಗುಣಪೂರ್ಣತ್ವವೂ ಕೂಡುವುದಿಲ್ಲ ಎನ್ನುವುದನ್ನೂ ನಿರಾಕರಣೆಮಾಡಿದಂತೆ ಆಗುತ್ತದೆ. ಹೇಗೆಂದರೆ ಆಚಾರ್ಯರು ಗೀತಾಭಾಷ್ಯದಲ್ಲಿ ಉದಾಹರಿಸಿರುವ ಬ್ರಹ್ಮವೈವರ್ತಪುರಾಣೋಕ್ತಿ “ದೇಹೋಽಯಂ ಮೇ ಸದಾನಂದೋ ನೈವ ಪ್ರಕೃತಿ ನಿರ್ಮಿತಃ । ಪರಿಪೂರ್ಣಶ್ಚ ತೇನ ನಾರಾಯಣೋಽಸ್ಮ್ಯಹಂ ॥” ಹೇಳುತ್ತದೆ, .ಅಥವಾ ಓಂ ಆಹ ಚ ತನ್ಮಾತ್ರಂ ಓಂ ಎಂಬ ಸೂತ್ರದಭಾಷ್ಯದಲ್ಲಿ ಉಕ್ತವಾದಂತೆ ಗುಣಗಳಿಂದ ಅಭಿನ್ನವಾದ ದೇಹವುಳ್ಳವನೆಂದೂ ಸಿದ್ಧಿಸುತ್ತದೆ.

ನನು ಜೀವಚೈತನ್ಯಾತ್ ಅನ್ಯಸ್ಯ ಬ್ರಹ್ಮಣೋ ಮಾನಾಭಾವೇನ ಅಭಾವಾತ್ ತಸ್ಯ ಚ ಅಹಂಧೀಸಿದ್ಧತ್ವೇನ ಅವಿಷಯತ್ವಾತ್ ।
ಸತ್ಯಪಿ ತದ್ಜ್ಞಾನೇ ಮುಕ್ತ್ಯದೃಷ್ಟ್ಯಾ ಫಲಾಭಾವಾತ್ ತತ ಏವ ಅಧಿಕಾರ್ಯಾದಿ ಅಭಾವಾಚ್ಚ "ಬ್ರಹ್ಮ ಜಿಜ್ಞಾಸಾ ಕರ್ತವ್ಯಾ" ಇತ್ಯುಕ್ತಿಃ ಅಯುಕ್ತಾ ಇತ್ಯಾಶಂಕಾಯಾಂ ಪ್ರಾಪ್ತಾಯಾಂ ಓಂ ಓಂ ಅಥಾತೋ ಬ್ರಹ್ಮಜಿಜ್ಞಾಸಾ ಓಂ ಇತಿ ವ್ಯಾಚಷ್ಟೇ ॥

ಜೀವನಿಂದ ಬೇರೆಯಾದ ಬ್ರಹ್ಮ ಇದ್ದಾನೆ ಎಂಬುದಕ್ಕೆ ಪ್ರಮಾಣವೇ ಇಲ್ಲ ಮತ್ತು ಜೀವನಾದರೂ "ನಾನು" ಎಂಬ ಜ್ಞಾನದಿಂದಲೇ ಸಿದ್ಧನಾಗಿರುವುದರಿಂದಲೂ ಒಂದು ವೇಳೆ ಜೀವನಿಂದ ಬೇರೆಯಾದ ಬ್ರಹ್ಮನಿದ್ದರೂ ಅವನಿಂದ ಮುಕ್ತಿದೊರೆಯುವುದು ಕಂಡಿಲ್ಲವಾದ್ದರಿಂದ ಫಲವಿಲ್ಲದಿರುವುದರಿಂದಲೂ ಬ್ರಹ್ಮ ಜಿಜ್ಞಾಸಾ ಎಂದು ಹೇಳಿದ್ದು ಯುಕ್ತವಾಗುವುದಿಲ್ಲ ಎಂದು ಪೂರ್ವಪಕ್ಷ ಮಾಡಲಾಗಿ ಅದನ್ನು ನಿರಾಕರಿಸುವುದಕ್ಕಾಗಿ ವೇದವ್ಯಾಸದೇವರು ಓಂ ಓಂ ಅಥಾತೋ ಬ್ರಹ್ಮ ಜಿಜ್ಞಾಸಾ ಓಂ ಎಂದು ಉತ್ತರಮೀಮಾಂಸಾ ಶಾಸ್ತ್ರವನ್ನು ರಚನೆಮಾಡಿದರು.

ಸೂತ್ರಾರ್ಥಃ ಇತಿ ನಿರ್ವಿಶೇಷಿತ ಸೂತ್ರಪದೇನ "ನಿರ್ವಿಶೇಷಿತಸೂತ್ರತ್ವಂ ಬ್ರಹ್ಮಸೂತ್ರಸ್ಯ ಚಾಪ್ಯತಃ । ಯಥಾ ವ್ಯಾಸತ್ವಮೇಕಸ್ಯ ಕೃಷ್ಣಸ್ಯಾನ್ಯೇ ವಿಶೇಷಣಾತ್॥ ಸವಿಶೇಷಣಸೂತ್ರಾಣಿ ಹ್ಯಪರಾಣಿ ವಿದೋ ವಿದುಃ । ಮುಖ್ಯಸ್ಯ ನಿರ್ವಿಶೇಷೇಣ ಶಬ್ದೋಽನ್ಯೇಷಾಂ ವಿಶೇಷತಃ ॥
ಇತಿ ವೇದವಿದಃ ಪ್ರಾಹುಃ ಶಬ್ದತತ್ವಾರ್ಥ ವೇದಿನಃ॥"
ಇತ್ಯುಕ್ತದಿಶಾ ಬ್ರಹ್ಮಸೂತ್ರಾರ್ಥ ಇತ್ಯುಪಲಭ್ಯತೇ ॥

ಶ್ರೀಮದಾಚಾರ್ಯರು "ಸೂತ್ರಾರ್ಥ ಉಚ್ಯತೇ" ಎಂದು ಯಾವ ವಿಶೇಷಣವನ್ನೂ ಹೇಳದೆ ಸೂತ್ರ ಎಂದು ಮಾತ್ರ ಹೇಳಿದ್ದರಿಂದ, ಜೈಮಿನಿ ಸೂತ್ರವೇ ಮೊದಲಾದ ನಾನಾ ಸೂತ್ರಗಳಿರುವಾಗ ಯಾವ ಸೂತ್ರವನ್ನು ತೆಗೆದುಕೊಳ್ಳಬೇಕು ಎಂಬ ಪ್ರಶ್ನೆಗೆ ಉತ್ತರವಾಗಿ "ನಿರ್ವಿಶೇಷಿತ ಸೂತ್ರತ್ವಂ" ಎನ್ನುವ ಸ್ಕಾಂದಪುರಾಣದ ವಾಕ್ಯದಿಂದ ಸಂಶಯವನ್ನು ಪರಿಹರಿಸುತ್ತಾರೆ. ಹೇಗೆ ವ್ಯಾಸ ಎನ್ನುವುದರಿಂದ ಕೃಷ್ಣದ್ವೈಪಾಯನರಾದ ವೇದವ್ಯಾಸದೇವರನ್ನು ತೆಗೆದುಕೊಳ್ಳುತಾರೋ ಹಾಗೆ ಸೂತ್ರ ಎಂದರೆ ಬ್ರಹ್ಮಸೂತ್ರವೆಂದೇ ತಿಳಿಯತಕ್ಕದ್ದು ಏಕೆಂದರೆ ಮುಖ್ಯವಾದದ್ದು ವಿಶೇಷಣವಿಲ್ಲದೆ ಹೇಳಲಾಗುತ್ತದೆ ಮತ್ತೂ ಅಮುಖ್ಯವಾದದ್ದು ವಿಶೇಷಣಪೂರ್ವಕವಾಗಿ ಹೇಳಲ್ಪಡುತ್ತದೆ ಎಂದು ವೇದೋಪನಿಷತ್ತುಗಳ ಯಥಾರ್ಥವನ್ನು ತಿಳಿದ ಜ್ಞಾನಿಗಳು ಹೇಳುತ್ತಾರೆ.. ಈ ಎಲ್ಲ ಕಾರಣಗಳಿಂದ "ಸೂತ್ರ" ಎಂದರೆ "ಬ್ರಹ್ಮಸೂತ್ರ" ಎಂದು ಅರ್ಥ ಮಾಡಿಕೊಳ್ಳಬೇಕು.

ಬ್ರಹ್ಮರುದ್ರಾದಿದೇವತೆಗಳಿಂದ ಜ್ಞಾನಾರ್ಥವಾಗಿ ಪ್ರಾರ್ಥಿತನಾದ ಶ್ರೀಮನ್ನಾರಾಯಣದೇವರು ವೇದವ್ಯಾಸರೂಪದಿಂದ ಅವತಾರಮಾಡಿ ವೇದಗಳನ್ನು ವಿಭಾಗಮಾಡಿ, ವೇದಾರ್ಥ ನಿರ್ಣಾಯಕಗಳಾದ ಬ್ರಹ್ಮಮೀಮಾಂಸಾಸಾಸ್ತ್ರವನ್ನು ರಚನೆಮಾಡಿದರು.. ಈ ಬ್ರಹ್ಮಮೀಮಾಂಸಾ ಶಾಸ್ತ್ರದಲ್ಲಿ ನ್ಯಾಯ-ಯುಕ್ತಿಗಳನ್ನು ೫೬೪ ಸೂತ್ರಗಳಿಂದ ೪ ಅಧ್ಯಾಯ, ೧೬ ಪಾದಗಳಲ್ಲಿ ತಿಳಿಸಿದ್ದಾರೆ.. "ವಿಷಯೋ ವಿಶಯಶ್ಚೈವ ಪೂರ್ವ ಪಕ್ಷಸ್ತ ಥೋತ್ತರಂ । ಪ್ರಯೋಜನಂ ಚ ಪಂಚೈತಾನ್ ಪ್ರಾಂಚೋಽಧಿಕರಣಂ ವಿದುಃ ॥" ಎಂಬ ಉಕ್ತಿಯಂತೆ ಪ್ರತಿಯೊಂದು ಅಧಿಕರಣದಲ್ಲೂ ವಿಷಯ, ಸಂಶಯ, ಪೂರ್ವಪಕ್ಷ, ಸಿದ್ಧಾಂತ ಮತ್ತು ಪ್ರಯೋಜನ ಎಂದು ಐದು ಅಂಗಗಳಿರುತ್ತವೆ. ಇದನ್ನು ಭಾಷ್ಯ, ಟೀಕಾ ಮತ್ತು ಟಿಪ್ಪಣಿಗಳಲ್ಲಿ ವಿವರಿಸಲಾಗಿದೆ.

ಬ್ಯಹ್ಮಮೀಮಾಂಸಾಶಾಸ್ತ್ರವು ಪ್ರಮಾಣಭೂತವೂ ಅಪೇಕ್ಷಿತವಾದ ಮೋಕ್ಷಸಾಧಗಳನ್ನು ತಿಳಿಸಿದರೆ ಮಾತ್ರ ಜ್ಞಾನಿಗಳಿಂದ ಗ್ರಾಹ್ಯವಾಗುತ್ತದೆ. ಸಾಕ್ಷಾತ್ ನಾರಾಯಣನ ಅವತಾರವೇ ಆದ ವೇದವ್ಯಾಸದೇವರಿಂದ ರಚಿತವಾಗಿರುವುದರಿಂದ ಇದು ಆಪ್ತಿಮೂಲವೂ ಶ್ರುತಿಗಳ ಅರ್ಥ ನಿರ್ಣಯಿ ಸುವುದರಿಂದ ಶ್ರುತಿಮೂಲವೂ, ಯುಕ್ತಿಗಳಿಂದ ಸಿದ್ಧಾಂತವನ್ನು ಪ್ರತಿಪಾದಿಸುವುದರಿಂದ ಯುಕ್ತಿಮೂಲವೂ ಆಗಿದೆ. "ಆಪ್ತಿಮೂಲತಯಾ ಚೈವ ಶ್ರುತಿಮೂಲತಯಾ ತಥಾ । ಯುಕ್ತಿಮೂಲತಯಾ ಚೈವ ಪ್ರಾಮಾಣ್ಯಂ ತ್ರಿವಿಧಂ ಮಹತ್ ॥" (ಅನುವ್ಯಾಖ್ಯಾನ ೧.೧.೧)

'ಅಧಿಕಾರಂ ಫಲಂ ಚೈವ ಪ್ರತಿಪಾದ್ಯಂ ಚ ವಸ್ತು ಯತ್ । ಸ್ಮೃತ್ವಾ ಪ್ರಾರಭತೇ ಗ್ರಂಥೇ ಕರೋತೀಶೋ ಮಹತ್ಫಲಮ್ ॥" (ಭಾಗವತತಾತ್ಪರ್ಯನಿರ್ಣಯ ೧.೧.೧). ಈ ಗ್ರಂಥದಲ್ಲಿ ಪ್ರವರ್ತನೆ ಮಾಡಬೇಕಾದರೆ ಅಧಿಕಾರಿ, ವಿಷಯ, ಪ್ರಯೋಜನ ಮತ್ತು ಸಂಬಂಧ ಎಂಬ ನಾಲಕ್ಕು ಅನುಬಂಧಗಳು ಅವಶ್ಯಕವಾಗಿ ಇರಬೇಕು. ವಿಷಯ ಮತ್ತು ಪ್ರಯೋಜನಗಳಿದ್ದರೆ ಅಧಿಕಾರಿ ಇರುತ್ತಾನೆ. ಅಜ್ಞಾತ ಅಥವಾ ಸಂದಿಗ್ಧವಾದದ್ದೇ ವಿಷಯವಾಗಿರುತ್ತದೆ. ಅಹಂ ಎಂಬ ಜ್ಞಾನದಿಂದ ಸಿದ್ಧನಾದ ಜೀವನಿಂದ ಬೇರೆಯಾದ ದೋಷದೂರನೂ, ಸಕಲಗುಣಪೂರ್ಣನೂ ಬ್ರಹ್ಮಶಬ್ದವಾಚ್ಯನೂ ಆದ ವಿಷ್ಣುವೇ ವಿಷಯ. ಪರಮಪುರುಷಾರ್ಥವಾದ ಮೋಕ್ಷವೇ ಪ್ರಯೋಜನ. ಮೋಕ್ಷವನ್ನು ಬಯಸುವ ಜೀವರೇ ಅಧಿಕಾರಿಗಳು. ವಿಷಯ, ಅಧಿಕಾರಿ, ಮತ್ತು ಪ್ರಯೋಜನ ಇವುಗಳಿಗೆ ಪರಸ್ಪರ ಸಂಬಂಧವೂ ಇರುವುದರಿಂದ ಈ ಶಾಸ್ತ್ರ ಎಲ್ಲ ಸಜ್ಜನರಿಂದ ಗ್ರಾಹ್ಯವಾಗಿರುವುದು.

ಬ್ರಹ್ಮಸೂತ್ರಗಳ ನಾಲಕ್ಕು ಅಧ್ಯಾಯಗಳಲ್ಲಿ ಒಂದನೇ ಅಧ್ಯಾಯದಲ್ಲಿ, ಬ್ರಹ್ಮ ಸಕಲ ಸದ್ಗುಣ ಪೂರ್ಣನೆಂದು ಎಲ್ಲ ವೈದಿಕ ಶಬ್ದಗಳನ್ನು ಸಮನ್ವಯಮಾಡಿ ಸಿದ್ಧಮಾಡಿದೆ. ಎರಡನೆ ಅಧ್ಯಾಯದಲ್ಲಿ ಸಮನ್ವಯದ ಮೇಲೆ ಆಪಾತತಃ ಬಂದ ವಿರೋಧಗಳನ್ನು ಪರಿಹಾರಮಾಡಲಾಗಿದೆ. ಮೂರನೆ ಅಧ್ಯಾಯದಲ್ಲಿ ಮೋಕ್ಷಸಾಧನಗಳನ್ನು ಹೇಳಿದೆ. ನಾಲಕ್ಕನೇ ಅಧ್ಯಾಯವು ಮೋಕ್ಷದ ಸ್ವರೂಪವನ್ನು ತಿಳಿಸುತ್ತದೆ.

ಓಂ ಓಂ ಅಥಾತೋ ಬ್ರಹ್ಮ ಜಿಜ್ಞಾಸಾ ಓಂ, ಇದು ಪ್ರಥಮಾಧಿಕರಣ ಸೂತ್ರ., ಅಥ = ಅಧಿಕಾರ ಸಂಪತ್ಯನಂತರಂ, ಅತಃ = ಮೋಕ್ಷಾಖ್ಯ ಫಲಸದ್ಭಾವಾತ್, (ವೇದಸ್ಯ ಪ್ರಾಮಾಣ್ಯಾತ್, ಸಿದ್ಧಾರ್ಥಪರತ್ವಾತ್, ಇತ್ಯಾದಿ) ಓಂ ಬ್ರಹ್ಮಣಃ = ಗುಣಪೂರ್ಣ ವಿಷ್ಣುರೂಪ ಬ್ರಹ್ಮಣಃ, ಜಿಜ್ಞಾಸಾ = ಶ್ರವಣ, ಮನನ, ನಿಧಿಧ್ಯಾಸನರೂಪಾ (ಕರ್ತವ್ಯ). ಅಂದರೆ ಅಧಿಕಾರ ಬಂದನಂತರ ಮೋಕ್ಷರೂಪವಾದ ಫಲವಿರುವುದರಿಂದ ಗುಣಪೂರ್ಣನಾದ ವಿಷ್ಣುವಿನ ಶ್ರವಣಮನನ ನಿಧಿಧ್ಯಾಸನರೂಪವಾದ ವಿಚಾರವು ಸರ್ವ ಮುಮುಕ್ಷುಗಳಿಂದ ಮಾಡಲ್ಪಡಬೇಕು ಎಂದು ಈ ಸೂತ್ರದಲ್ಲಿ ಸಮರ್ಥನೆ ಮಾಡಲಾಗಿದೆ. ದ್ವಿತೀಯಾಧಿಕರಣದ ಓಂ ಜನ್ಮಾದ್ಯಸ್ಯ ಯತಃ ಓಂ  ಎಂಬ ಸೂತ್ರದಲ್ಲಿ ಜಿಜ್ಞಾಸ್ಯನಾದ ಬ್ರಹ್ಮನ ಲಕ್ಷಣವನ್ನು ಹೇಳಿದ್ದಾರೆ. ಈ ಲಕ್ಷಣಕ್ಕೆ ಅತಿವ್ಯಾಪ್ತಿ, ಅವ್ಯಾಪ್ತಿ, ಅಸಂಭವ ರೂಪವಾದ ಯಾವ ದೋಷಗಳೂ ಇಲ್ಲವೆಂದು ಓಂ ಶಾಸ್ತ್ರಯೋನಿತ್ವಾತ್ ಓಂ, ಓಂ ತತ್ತು ಸಮನ್ವಯಾತ್ ಓಂ ಎಂಬ ಮೂರನೆ ಮತ್ತು ನಾಲಕನೇ ಅಧಿಕರಣಗಳಲ್ಲಿ ಪ್ರತಿಪಾದಿತವಾಗಿದೆ. ಬ್ರಹ್ಮ ಶಬ್ದಪ್ರತಿಪಾದ್ಯನಲ್ಲ ಎಂಬ ಪೂರ್ವಪಕ್ಷವನ್ನು ಓಂ ಈಕ್ಷತೇರ್ನಾಶಬ್ದಂ ಓಂ ಎಂದು ಪ್ರಾಂಭವಾಗುವ ಅಧಿಕರಣದಲ್ಲಿ ನಿರಾಕರಿಸಲಾಗಿದೆ.  ಈ ಐದು ಆಧಿಕರಣಗಳಲ್ಲಿ ಉಕ್ತವಾದ ವಿಷಯವನ್ನೇ ಪ್ರಥಮಾಧ್ಯಾಯದ ಉಳಿದ ಭಾಗದಲ್ಲಿ ವಿಸ್ತಾರವಾಗಿ ಚರ್ಚೆಮಾಡಲಾಗಿದೆ. ಈ ಐದು ಅಧಿಕರಣಗಳಲ್ಲಿ ಎಲ್ಲಾ ವಿಚಾರವನ್ನೂ ತಿಳಿಸಿದ ಮೇಲೆ ಹೇಳಬೇಕಾದ ವಿಷಯವೇ ಇಲ್ಲವಲ್ಲ ಎಂದರೆ "ಸತ್ಯಂ। ನ ಬ್ರಹ್ಮ ಸ್ವರೂಪ ನಿರೂಪಣೇ ಕಿಮಪ್ಯವಶಿಷ್ಟಂ । ತಥಾಪಿ ತತ್ತು ಸಮನ್ವಾತ್ ಇತಿ ಉಪಕ್ರಮಾದಿ ತಾತ್ಪರ್ಯಲಿಂಗಬಲಾತ್ ಸಕಲಸ್ಯಾಪಿ ಶಾಸ್ತ್ರಸ್ಯ ಯೋ ಬ್ರಹ್ಮಣಿ ಪರಮಮುಖ್ಯವೃತ್ಯಾ ಪ್ರತಿಪಾದ್ಯಪ್ರತಿಪಾಕತ್ವ ಲಕ್ಷಣ ಸಮನ್ವಯೋಽಭಿಹಿತಃ ತಮೇವ ಸಮನ್ವಯಂ ವಿಭಾಗೇನ ಪ್ರಪಂಚೇನ ಆನಂದಮಯ ಇತ್ಯಾದಿನಾ ಅಧ್ಯಾಯೇನ ವದತಿ ಸೂತ್ರಕಾರಃ ಇತಿ ನ ವೈಯರ್ಥ್ಯಂ" – ನ್ಯಾಯಸುಧಾ.

ಅಧಿಕಾರ ಜಾತಿಕೃತ ಗುಣಕೃತ ಎಂದು ಎರಡು ವಿಧ. ಮನುಷ್ಯರಲ್ಲಿ ಉತ್ತಮವಾದವರು ಬ್ರಹ್ಮವಿದ್ಯೆಗೆ ಅಧಮಾಧಿಕಾರಿಗಳು,. ಋಷಿಗಳೂ ಗಂಧರ್ವರೂ ಮಧ್ಯಮಾಧಿಕಾರಿಗಳು. ದೇವತೆಗಳು ಉತ್ತಮಾಧಿಕಾರಿಗಳು. ಇದು ಜಾತಿಕೃತ ಆಧಿಕಾರಿ ಭೇದ. ಕೇವಲ ವಿಷ್ಣುಭಕ್ತಿಸಹಿತವಾಗಿ ಅಧ್ಯಯನಮಾಡಿದವನು ಅಧಮಾಧಿಕಾರಿ, ಶಮದಮಾದಿಗಳುಳ್ಳವನು

ಮಧ್ಯಮಾಧಿಕಾರಿ ಮತ್ತು ಅನಿತ್ಯವೂ ಅಸಾರವೂ ಆದ ಈ ಪ್ರಪಂಚದ ವಿಷಯವನ್ನು ಬಿಟ್ಟು ಶ್ರೀವಿಷ್ಣುವಿನಪಾದವನ್ನೇ ನಂಬಿದವನು ಉತ್ತಮಾಧಿಕಾಗಿಯಾಗಿರುತ್ತಾನೆ. ಇದು ಗುಣಕೃತ ಅಧಿಕಾರಿಭೇದ. "ಮಂದಮಧ್ಯಮೋತ್ತಮತ್ವೇನ ತ್ರಿವಿಧಾ ಹ್ಯಧಿಕಾರಿಣಃ । ತತ್ರ ಮಂದಾ ಮನುಷ್ಯೇಷು ಯ ಉತ್ತಮಗಣಾ ಮತಾಃ । ಮಧ್ಯಮಾ ಋಷಿಗಂಧರ್ವಾ ದೇವಾಸ್ತತ್ರೋತ್ತಮಾ ಮತಾಃ । ಇತಿ ಜಾತಿ ಕೃತೋ ಭೇದಸ್ತಥಾನ್ಯೇ ಗುಣಪೂರ್ವಕಃ ॥ ಭಕ್ತಿಮಾನ್ ಪರಮೇ ವಿಷ್ಣೌ ಯಸ್ತ್ವಧ್ಯಯನವಾನ್ ನರಃ । ಅಧಮಃ ಶಮಾದಿಸಂಯುಕ್ತೋ ಮಧ್ಯಮಸ್ಸಮುದಾಹೃತಃ ॥ ಆಬ್ರಹ್ಮಸ್ತಂಬಪರ್ಯಂತಮಸಾರಂ ಚಾಪ್ಯನಿತ್ಯಕಂ । ವಿಜ್ಞಾಯ ಜಾತವೈರಾಗ್ಯೋ ವಿಷ್ಣುಪಾದೈಕಸಂಶ್ರಯಃ ॥ ಸ ಉತ್ತಮೋಽಧಿಕಾರೀ ಸ್ಯಾತ್ ಸನ್ಯಸ್ತಾಖಿಲಕರ್ಮವಾನ್ ॥ ಇತಿ ಭಾಗವತತಂತ್ರೇ" ಶ್ರೀಮನ್ನಾರಾಯಣನ ಪ್ರಸಾದದಿಂದಲೇ ಮುಕ್ತಿಯೂ ಆನಂದ ಪ್ರಾಪ್ತಿಯೂ ಆಗುತ್ತದೆ. ಜ್ಞಾನವಿಲ್ಲದೆ ಅವನ ಪರಮ ಪ್ರಸಾದವಾಗುವುದಿಲ್ಲ ಆದ್ದರಿಂದ ಬ್ರಹ್ಮಜ್ಞಾನಕ್ಕಾಗಿ ಜಿಜ್ಞಾಸೆಯನ್ನು ಮಾಡಬೇಕು. "ಯತೋ ನಾರಾಯಣ ಪ್ರಸಾದಮೃತೇ ನ ಮೋಕ್ಷಃ, ನ ಚ ಜ್ಞಾನಂ ವಿನಾ ಅತ್ಯರ್ಥಪ್ರಸಾದಃ, ಅತೋ ಬ್ರಹ್ಮಜಿಜ್ಞಾಸಾ ಕರ್ತವ್ಯಾ, ಬ್ರಹ್ಮ ಶಬ್ದಶ್ಚ ವಿಷ್ಣಾವೇವ" (ಸೂ.ಭಾ.೧.೧.೧)

ಜೀವ, ಬ್ರಹ್ಮ ಮತ್ತು ಜಗತ್ತು ಈ ಮೂರೂ ಪರಸ್ಪರ ಭಿನ್ನವಾಗಿವೆ. ಓಂ ಜನ್ಮಾದ್ಯಸ್ಯ ಯತಃ ಓಂ ೧.೧.೨. ಪ್ರಮಾಣಪ್ರಮಿತವಾದ ಈ ಜಗತ್ತಿನ ಸೃಷ್ಟಿ,ಸ್ಥಿತಿ,ಲಯ,ನಿಯಮನ,ಜ್ಞಾನ,ಅಜ್ಞಾನ,ಬಂಧ ಮತ್ತು ಮೋಕ್ಷಗಳು ಯಾರಿಂದ ಆಗುತ್ತವೋ, ಆ ವಿಷ್ಣುವೇ ಬ್ರಹ್ಮ. (೧.೧.೨). "ಸೃಷ್ಟಿಸ್ಥಿತಿ ಸಂಹಾರಾ ನಿಯತಿರ್ಜ್ಞಾನಮಾವೃತಿಃ ।ಬಂಧಮೋಕ್ಷೌ ಚ ಪುರುಷಾದ್ಯಸ್ಮಾತ್ ಸ ಹರಿರೇಕರಾಟ್ ॥'.

ಬ್ರಹ್ಮ ಶಾಸ್ತ್ರಪ್ರಮಾಣದಿಂದ ಮಾತ್ರ ತಿಳಿಯಲ್ಪಡತಕ್ಕವನು. ಓಂ ಶಾಸ್ತ್ರಯೋನಿತ್ವಾತ್ ಓಂ – ಋಗ್ವೇದ ಮೊದಲಾದ ನಾಲ್ಕುವೇದಗಳು, ಮಹಾಭಾರತ, ಪಾಂಚರಾತ್ರ ಮತ್ತು ಮೂಲರಾಮಾಯಣ ಇವುಗಳಿಗೆ ಶಾಸ್ತ್ರವೆಂದು ಹೆಸರು. "ಋಗ್ಯಜುಸ್ಸಾಮಾಥರ್ವಾಶ್ಚ ಭಾರತಂ ಪಂಚರಾತ್ರಕಂ । ಮೂಲರಾಮಾಯಣಂ ಚೈವ ಶಾಸ್ತ್ರಮಿತ್ಯಭಿಧೀಯತೇ ॥ ಯಚ್ಚಾನುಕೂಲಮೇತಸ್ಯ ತಚ್ಚ ಶಾಸ್ತ್ರಂ ಪ್ರಕೀರ್ತಿತಮ್ । ಅತೋಽನ್ಯೋ ಗ್ರಂಥವಿಸ್ತಾರೋ ನೈವ ಶಾಸ್ತ್ರಂ ಕುವರ್ತ್ಮ ತತ್ ॥" ಇತಿ ಸ್ಕಾಂದೇ, ಈ ಶಾಸ್ತ್ರಪ್ರಮಾಣದಿಂದ ವಿಷ್ಣುವೇ ಜಗಜ್ಜನ್ಮಾದಿ ಕಾರಣ ನೆಂದು ತಿಳಿಯುತ್ತದೆ. "ಶಾಸ್ತ್ರಂ ಯೋನಿಃ ಪ್ರಮಾಣಮಸ್ಯೇತಿ ಶಾಸ್ತ್ರಯೋನಿಃ".

ಓಂ ತತ್ತು ಸಮನ್ವಯಾತ್ ಓಂ ೧.೧.೪ ಉಪಕ್ರಮ–ಉಪಸಂಹಾರ ಮೊದಲಾದ ತಾತ್ಪರ್ಯ ನಿರ್ಣಾಯಕ ಲಿಂಗಗಳಿಂದ ವಿಷ್ಣುವನ್ನೇ ಶಾಸ್ತ್ರವು ಹೇಳುತ್ತದೆ. ಉಪಕ್ರಮೋಪಸಂಹಾರೌ ಅಭ್ಯಾಸೋಽಪೂರ್ವತಾ ಫಲಂ । ಅರ್ಥವಾದೋಪಪತ್ತೀ ಚ ಲಿಂಗಂ ತಾತ್ಪರ್ಯನಿರ್ಣಯೇ ॥" .– ಇತಿ ಬೃಹತ್ ಸಂಹಿತಾಯಾಂ.

ಓಂ ಈಕ್ಷತೇರ್ನಾಶಬ್ದಂ ಓಂ ೧.೧.೫ – ಬ್ರಹ್ಮ ಶಬ್ದವಾಚ್ಯನಲ್ಲವೆಂದು ತಿಳಿಯಬಾರದು. ಏಕೆಂದರೆ ಉಪಾಸಕನು ಪರಮಾತ್ಮನ್ನು ಕಾಣುತ್ತಾನೆ ಎಂದು ಶಾಸ್ತ್ರದಲ್ಲಿ ಹೇಳಿದೆ. ಅವನು ಶಾಸ್ತ್ರಕ್ಕೆ ವಿಷಯನಲ್ಲ ಎನ್ನುವುದು ಸರಿಯಲ್ಲ. ಅದ್ಭುತವಾಗಿರುವುದರಿಂದ ಅವಾಚ್ಯ ನೆಂದೂ, ಅನಂತಗುಣಪೂರ್ಣನಾದ್ದರಿಂದ ಅತರ್ಕ್ಯ, ಅಜ್ಞೇಯ ಎಂದೂ ಶ್ರುತಿಯಲ್ಲಿ ಹೇಳಿದೆ. "ಅಪ್ರಸಿದ್ಧೇರವಾಚ್ಯಂ ತದ್ವಾಚ್ಯಂ ಅರ್ವಾಗಮೋಕ್ತಿತಃ" "ಈಕ್ಷಣೀಯತ್ವತೋ ವಿಷ್ಣುಃ ವಾಚ್ಯ ಏವ ನ ಚಾನ್ಯಥಾ । – ಅನುವ್ಯಾಖ್ಯಾನ.

ವಿಷ್ಣು ಒಬ್ಬನೇ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ನಾಲಕ್ಕು ರೂಪಗಳುಳ್ಳವನು; ಅಥವಾ ನಾರಾಯಣ, ವಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ಐದು ರೂಪಗಳುಳ್ಳವನು. ಇದನ್ನು ಪ್ರತಿ ಅಧಿಕರಣದಲ್ಲಿಯೂ, ಪ್ರತಿಸೂತ್ರ ದಲ್ಲಿಯೂ ಹೆಚ್ಚೇನು ಪ್ರತಿ ಅಕ್ಷರದಲ್ಲಿಯೂ ಪ್ರತಿಪಾದಿಸಲಾಗಿದೆ. "ವಾಸುದೇವಾದಿ ರೂಪೇಣ ಚತುರ್ಮೂರ್ತಿಶ್ಚ ಸರ್ವಶಃ । ಅಥವಾ ಪಂಚಮೂರ್ತಿಃ ಸ ಪ್ರೋಕ್ತೋಽಧಿಕರಣಂ ಪ್ರತಿ ॥" ಅನುವ್ಯಾಖ್ಯಾನ ೧.೧.೧೨. ಮತ್ಸ್ಯಾದಿರೂಪಗಳು ಪರಮಾತ್ಮನ ಸ್ವರೂಪಾಂಶಗಳಾದ್ದರಿಂದ (೨.೩.೫೦), ಅವಕ್ಕೆಲ್ಲ ವಿಷ್ಣುವಿಗೆ ಸಮಾನವಾದ ಐಶ್ವರ್ಯವೇ ಇರುವುದು. ಬ್ರಹ್ಮನಿಗೆ ಜಗಜ್ಜನ್ಮಾದಿಕಾರಣತ್ವವನ್ನು ಹೇಳಿದ್ದರಿಂದ ಅವನಿಗೆ ಅನಂತಗುಣ ಪೂರ್ಣತ್ವವನ್ನು ಹೇಳಿದಂತೆ ಆಗುತ್ತದೆ. ಬ್ರಹ್ಮ ಭೇದರಹಿತನೆಂದು ಶ್ರುತಿಯಲ್ಲಿ ಏಕೆ ಹೇಳಿದೆ ಎಂದರೆ ಅವನಲ್ಲಿ ಗುಣಗುಣಿಗಳಿಗೆ ಭೇದವಿಲ್ಲದಿದ್ದರೂ ವಿಶೇಷ ಎಂಬ ಶಕ್ತಿಯಿಂದ ಭೇದಕಾರ್ಯ ಉಂಟಾಗುತ್ತದೆ. "ವಿಶೇಷೋ ನಾಮ ಕಥಿತಃ ಸೋಽಸ್ತಿ ವಸ್ತುಷ್ವಶೇಷತಃ । ವಿಶೇಷಾಸ್ತೇಽಪ್ಯನಂತಾಶ್ಚ ಪರಸ್ಪರವಿಶೇಷಿಣಃ ॥ ಸ್ವನಿರ್ವಾಹಕತಾ ಯುಕ್ತಾಃ ಸಂತಿ ವಸ್ತುಷ್ವಶೇಷತಃ । ಅತೋಽನಂತಗುಣಂ ಬ್ರಹ್ಮ ನಿರ್ಭೇದಮಪಿ ಭಣ್ಯತೇ ॥" (ಅನುವ್ಯಾಖ್ಯಾನ ೧.೧.೨)

ಬ್ರಹ್ಮನಿಗೆ ಪ್ರಾಕೃತ ರೂಪವಿಲ್ಲ ಅಂದರೆ ಪಂಚಭೂತಗಳಿಂದಾದ ರೂಪವಿಲ್ಲ, ಆದರೂ ಜ್ಞಾನಾನಂದಾತ್ಮಕವಾದ ರೂಪವಿದೆ. ಪರಬ್ರಹ್ಮನಿಗೂ ಅವನ ರೂಪಕ್ಕೂ ಭೇದವಿಲ್ಲ. 'ಆನಂದೇನ

ತ್ವಭಿನ್ನೇನ ವ್ಯವಹಾರಃ ಪ್ರಕಾಶವತ್ । ಕಾಲವದ್ವಾ ಯಥಾ ಕಾಲಃ ಸ್ವಾವಚ್ಛೇದ ಕತಾಂ ವ್ರಜೇತ್ ॥ –ಇತಿ ಬ್ರಾಹ್ಮೆ' (೩.೩.೧೫).

ಈ ಜಗತ್ತಿನಲ್ಲಿ ಚೇತನ ಮತ್ತು ಅಚೇತನ ಎಂದು ಪದಾರ್ಥಗಳು ಎರಡು ವಿಧ. ಅಚೇತನವು ನಿತ್ಯ, ಅನಿತ್ಯ ಮತ್ತು ನಿತ್ಯಾನಿತ್ಯ ಎಂದು ಮೂರು ವಿಧ. ನಿತ್ಯ ಪದಾರ್ಥಗಳಿಗೆ ಮುಖ್ಯಾರ್ಥದಲ್ಲಿ ಉತ್ಪತ್ತಿ ಇಲ್ಲ ಅಂದರೆ ಮೊದಲು ಇಲ್ಲದೇ ಇದ್ದು ಆಮೇಲೆ ಉಂಟಾಗುವುದಿಲ್ಲ. 'ಅಥ ಹ ವಾವ ನಿತ್ಯಾನಿ ಪುರುಷಃ ಪ್ರಕೃತಿರಾತ್ಮಾ ಕಾಲಃ ಇತಿ ॥ ಯಾನಿ ಹ ವಾವ ಉತ್ಪತ್ತಿಮಂತಿ ತಾನ್ಯನಿತ್ಯಾನಿ । ಯಾನಿ ಹ ವಾವ ಅನುತ್ಪತ್ತಿಮಂತಿ ತಾನಿ ನಿತ್ಯಾನಿ । ನ ಹ್ಯೇತಾನಿ ಕದಾಚನೋತ್ಪದ್ಯಂತೇ ನ ವಿಲೀಯಂತೇ ಪುರುಷಃ ಪ್ರಕೃತಿರಾತ್ಮಾ ಕಾಲಃ ॥ ಅಥೈತಾನ್ಯುತ್ಪತ್ತಿಮಂತಿ ಚಾನುತ್ಪತ್ತಿಮಂತಿ ಚ ಪ್ರಾಣಃಶ್ರದ್ಧಾಽಕಾಶಃ ॥ ಇತಿ ಭಾಲ್ಲವೇಯಶ್ರುತಿಃ' ೨.೩.೧. 'ಪ್ರತ್ಯಕ್ಷಂ ಹರೇರ್ಜನ್ಮ ನ ವಿಕಾರಃ ಕಥಂಚನ । ಪುರುಷಃ ಪ್ರಕೃತಿಃ ಕಾಲೋ ಮಹಾನಿತ್ಯಾದಿಷು ಕ್ರಮಾತ್ । ವಿಕಾರ ಏವ ಜನನಂ ಪುರುಷೇ ತದ್ವಿಶೇಷಣಂ । ಪರತಂತ್ರ ವಿಶೇಷೋ ಹಿ ವಿಕಾರಃ ಇತಿ ಕೀರ್ತಿತಃ ॥ – ಇತಿ ಪಾದ್ಮೇ ೨.೩.೪'. ಅವ್ಯಾಕೃತಾಕಾಶ, ಪ್ರಕೃತಿ, ಪುರುಷ, ಕಾಲ, ವೇದ, ಮಹದಾದಿಗಳು ಇವುಗಳಿಗೆ ಪರಾಧೀನವಾಗಿ ವಿಶೇಷವನ್ನು ಪಡೆಯುವುದೆಂಬ ಉತ್ಪತ್ತಿ ಇದೆ.. ಅನಿತ್ಯಪದಾರ್ಥಗಳಿಗೆ ಮುಖ್ಯವಾಗಿ ಉತ್ಪತ್ತಿಯೇ ಇದೆ. ಇಂದ್ರಿಯಗಳು, ಮನಸ್ಸು, ಮುಖ್ಯಪ್ರಾಣ ಈ ಎಲ್ಲವೂ ಪರಮಾತ್ಮನಿಂದಲೇ ಉಂಟಾಗುತ್ತವೆ. 'ಶ್ರಿಯಃ ಸಿಸೃಕ್ಷುತ್ವಂ, ಪ್ರಕೃತೇಃ ಪರಿಣಾಮಃ, ಅವ್ಯಾಕೃತಸ್ಯ ಮೂರ್ತಸಂಬಂಧಃ, ಜೀವಸ್ಯ ದೇಹ ಸಂಬಂಧಃ, ಅಸಂಸ್ಪೃಷ್ಟಸ್ಯ ಉಪಚಯಃ ॥', "ಪ್ರಕೃತಿಃ ಪುರುಷಃ ಕಾಲೋ ವೇದಾಶ್ಚೇತಿ ತುಷ್ಟಯಂ । ನಿತ್ಯಂ ಸ್ವರೂಪತೋ ವಿಷ್ಣೋಃ ವಿಶೇಷಾವಾಪ್ತಿ ಮಾತ್ರತಃ । ಉತ್ಪತ್ತಿಮದಿತಿ ಪ್ರೋಕ್ತಂ ಲಕ್ಷ್ಮೀಸ್ತದಭಿಮಾನಿನೀ । ಸಿಸೃಕ್ಷುತ್ವ ವಿಶೇಷಂ ತತ್ಸಾಕ್ಷಾತ್ ಭಗವದಿಚ್ಛಯಾ । ಪ್ರಾಪ್ತೈವಸೃಷ್ಟೇತ್ಯುದಿತಾ ॥ ಪುಮಾಂಸೋ ದೇಹಸಂಬಂಧಾತ್ ಜನ್ಯಾ ಇತ್ಯೇವ ಕೀರ್ತಿತಾ ॥" "ಭೂತಂ ಸ್ವರೂಪೇಣ ಉತ್ಪತ್ತಿಮತ್ । ಅವ್ಯಾಕೃತಂ ನಿತ್ಯಂ ಮೂರ್ತ ಸಂಬಂಧೇನ । ಅಭಿಮಾನೀ ದೇಹ ಸಂಬಂಧೇನ । ಮುಖ್ಯಾಭಿಮಾನನೀ ಲಕ್ಷ್ಮೀಃ ಪರಾಧೀನ ವಿಶೇಷಾವಾಪ್ತ್ಯಾ॥ ಭೂತಸ್ಯ ಅನಿತ್ಯತ್ವಂ ಅಭಿಮಾನಿನಃ ದೇಹಹಾನಿಃ ದುಃಖಸ್ಪೃಷ್ಟಸ್ಯ ದುಃಖಪ್ರಾಪ್ತಿಃ ಲಕ್ಷ್ಮ್ಯಾಃ ಪೂರ್ಣತಾ । ಅಸಂಸ್ಪೃಷ್ಟಸ್ಯ ಉಪಚಯನಾಶಃ ॥ ಅನಿತ್ಯತ್ವಂ ದೇಹಹಾನಿಃ ದುಃಖಪ್ರಾಪ್ತಿರಪೂರ್ಣತಾ । ನಾಶಶ್ಚತುರ್ವಿಧಃ ಪ್ರೋಕ್ತಃ ತದಭಾವೋ ಹರೇಸ್ಸದಾ ॥".

ಈ ಜಗತ್ತಿಗೆ ವಿಷ್ಣು ಕಾರಣನೆಂದರೆ ನಿಮಿತ್ತಕಾರಣನೇ ಹೊರತು ಉಪಾದಾನಕಾರಣ ಎಂದು ಅರ್ಥವಲ್ಲ. ಪರಮಾತ್ಮ ವಿಕಾರಿಯಲ್ಲ ವಾದರೂ ವಿಕಾರಿಯಾದ ಪ್ರಕೃತಿಯನ್ನು ಪ್ರವೇಶಿಸಿ ಮಹದಾದಿ ರೂಪದಿಂದ ಪರಿಣಮಿಸುವಂತೆ ಮಾಡುತ್ತಾನೆ. ಆದ್ದರಿಂದ ಅವನಿಗೆ

ಪ್ರಕೃತಿ ಎಂದೂ ಹೆಸರು. 'ಅವಿಕಾರೋಽಪಿ ಪರಮಃ ಪ್ರಕೃತಿಂತು ವಿಕಾರಿಣೀಂ । ಅನುಪ್ರವಿಶ್ಯ ಗೋವಿಂದಃ ಪ್ರಕೃತಿಶ್ಚಾಭಿಧೀಯತೇ ॥ – ಇತಿ ನಾರದೀಯೇ ೧.೪.೬'. ಜಗತ್ತಿನಲ್ಲಿ ಆಗುವ ಎಲ್ಲ ಕಾರ್ಯಗಳೂ ಪರಮಾತ್ಮನ ಅಧೀನವಾಗಿರುವುದರಿಂದಲೇ ಆಗುತ್ತವೆ.

ಜೀವರು ನಿತ್ಯರಾದರೂ ಶರೀರವೆಂಬ ಉಪಾಧಿಯಿಂದ ಹುಟ್ಟುತ್ತಾರೆ ಎಂದು ಕರೆಯಲಾಗುತ್ತದೆ. ಈ ವಿಧವಾದ ಸೃಷ್ಟಿಯು ಪರಮಾತ್ಮ ನಿಂದಲೇ ಅಗುತ್ತದೆ 'ನಿತ್ಯಸ್ಯಾಪಿ ಜೀವಸ್ಯೋಪಾಧ್ಯಪೇಕ್ಷಯೋತ್ಪತ್ತಿರ್ಯುಜ್ಯತೇ । ಉತ್ಪದ್ಯಂತೇ ಚಿದಾತ್ಮಾನೋ ನಿತ್ಯನಿತ್ಯಾತ್ಪರಾತ್ಮನಃ । ಉಪಾಧ್ಯಪೇಕ್ಷಯಾ ತೇಷಾಮುತ್ಪತ್ತಿರಪಿ ಗೀಯತೇ ॥' ಇತಿ ವ್ಯೋಮಸಂಹಿತಾಯಾಂ(೨.೩.೧೮)

ಜೀವ ಅಣುರೂಪನಾಗಿ ಹೃದಯದಲ್ಲಿದ್ದರೂ, 'ಹೃದಿ ಹ್ಯೇಷ ಆತ್ಮಾ'–ಪ್ರ.ಉ.೩.೬ (೨.೩.೨೫) ದೀಪವು ತನ್ನ ಪ್ರಕಾಶದಿಂದ ಎಲ್ಲ ಕಡೆಗೂ ಹರಡುವಂತೆ ದೇಹದಲ್ಲೆಲ್ಲಾ ಚಿದ್ಗುಣದಿಂದ ವ್ಯಾಪ್ತನಾಗಿದ್ದಾನೆ, 'ವ್ಯಾಪ್ತ್ಯವ್ಯಾಪ್ತಿಯುತಾಸ್ತ್ವನ್ಯೇ ಚಿದ್ಗುಣೇನೈವ ನಾನ್ಯಥಾ' – ಇತಿ ಸ್ಕಾಂದೇ (೨.೩.೨೬). ಹೂವನ್ನು ಬಿಟ್ಟು ಅದರ ವಾಸನೆಯು ಬೇರೆ ಕಡೆಗೂ ಹರಡುವಂತೆ, 'ಓಂ ವ್ಯತಿರೇಕೋ ಗಂಧವತ್ತಥಾ ಚ ದರ್ಶಯತಿ ಓಂ' (೨.೩.೨೭) ಜೀವನ ಗುಣವು ಬೇರೆ ಕಡೆಗೂ ಪ್ರಸಾರವಾಗುತ್ತದೆ.

ಜೀವನು ಬ್ರಹ್ಮನಿಂದ ಭಿನ್ನನಾಗಿದ್ದಾನೆ, 'ಓಂ ಪೃಥಗುಪದೇಶಾತ್ ಓಂ' (೨.೩.೨೮). ಜ್ಞಾನ ಆನಂದ ಮೊದಲಾದ ಬ್ರಹ್ಮನಲ್ಲಿರುವಂಥ ಗುಣಗಳು ಅವನಲ್ಲಿಯೂ ಇರುವುದರಿಂದ ಜೀವ ಮತ್ತು ಬ್ರಹ್ಮನಿಗೆ ಅಭೇದವನ್ನು ಶ್ರುತಿಗಳು ಹೇಳುತ್ತವೆ. ಬ್ರಹ್ಮ ಸರ್ವಗುಣಾತ್ಮಕ ವಾಗಿರುವುದರಿಂದ 'ಇದೆಲ್ಲ ಬ್ರಹ್ಮ'ಎಂದು ಶ್ರುತಿ ಹೇಳುವಂತೆ, 'ಓಂ ತದ್ಗುಣಸಾರತ್ವಾತ್ತು ತದ್ವ್ಯಪದೇಶಃ ಪ್ರಾಜ್ಞವತ್ ಓಂ' (೨.೩.೨೯) ಈ ಅಭೇದವಾಕ್ಯದ ಅರ್ಥವನ್ನು ತಿಳಿಯಬೇಕು. ಜೀವನು ಬ್ರಹ್ಮನ ಅಂಶ, 'ಅಂಶೋ ಹ್ಯೇಷ ಪರಸ್ಯ ಭಿನ್ನಂ ಹ್ಯೇನಮಧಿಯಿರೇಽಭಿನ್ನಂ ಹ್ಯೇನಮಧೀಯಿರೇ–ಅಗ್ನಿವೇಶ್ಯ ಶ್ರುತಿಃ' (೨.೩.೪೩), ಆದರೆ ಜೀವ ಮತ್ಸ್ಯಾದಿಗಳಂತೆ ಬ್ರಹ್ಮನ ಸ್ವರೂಪಾಂಶವಲ್ಲ, 'ಅಪೂರ್ಣಶಕ್ತಿತ್ವಾಚ್ಚ ಜೀವಸ್ಯ ನ ಮತ್ಸ್ಯಾದಿ ಸಾಮ್ಯಂ' (೨.೩.೪೯). ಸ್ವರೂಪಾಂಶದಲ್ಲಿ ಅಂಶಿಯ ಸಾಮರ್ಥ್ಯ ಇರುತ್ತದೆ. ಆದರೆ ಭಿನ್ನಾಂಶನಾದ ಜೀವನು, ಬ್ರಹ್ಮನಂತೆ ಅಚಿಂತ್ಯನಲ್ಲ, ಪೂರ್ಣನಲ್ಲ ಹಾಗೂ ನಿತ್ಯ ಮುಕ್ತನೂ ಅಲ್ಲ. 'ಸ್ವಾಂಶಶ್ಚಾಥೋ ವಿಭಿನ್ನಾಂಶ ಇತಿ ದ್ವೇಧಾಂಶ ಇಷ್ಯತೇ । ಅಂಶಿನೋ ಯತ್ತು ಸಾಮರ್ಥ್ಯಂ ಯತ್ ಸ್ವರೂಪಂ ಯಥಾ ಸ್ಥಿತಿಃ ॥ ತದೇವ ನಾಣುಮಾತ್ರೋಽಪಿ ಭೇದಃ ಸ್ವಾಶಾಂಶಿನೋ ಕ್ವಚಿತ್ ।

ವಿಭನ್ನಾಂಶೋಽಲ್ಪಶಕ್ತಿಃ ಸ್ಯಾತ್ಕಿಂಚಿತ್ಸಾದೃಶ್ಯಮಾತ್ರಯುಕ್ ॥ ಇತಿ ವಾರಾಹೇ' (೨.೩.೪೭. ೪೯, ೫೦).

ಜೀವನು ಕರ್ತೃ, 'ಓಂ ಕರ್ತಾ ಶಾಸ್ತ್ರಾರ್ಥತ್ತ್ವಾತ್ ಓಂ' (೨.೩.೩೩). ಅವನಿಗೆ ಜ್ಞಾನದಲ್ಲಾಗಲೀ ಕರ್ಮದಲ್ಲಾಗಲೀ ಸ್ವಾತಂತ್ರ್ಯವಿಲ್ಲ, "ಯಥಾ ಜ್ಞಾನೇ 'ಇದಂ ಜ್ಞಾಸ್ಯಾಮಿ' ಇತಿ ಅನಿಯಮಃ ಪ್ರತೀಯತೇ ಏವಂ ಕರ್ಮಣ್ಯಪಿ ಜೀವಸ್ಯ". (೨.೩.೩೭). ಬಡಗಿಯು ಮತ್ತೊಬ್ಬನ ಅಧೀನವಾಗಿ ಕೆಲಸಮಾಡುವ ಹಾಗೆ ಪರಮಾತ್ಮನ ಅಧೀನನಾಗಿ ಜೀವನು ಕರ್ಮವನ್ನು ಮಾಡುತ್ತಾನೆ, 'ಓಂ ಯಥಾ ಚ ತಕ್ಷೋಭಯಥಾ ಓಂ', 'ಕರ್ತೃತ್ವಂ ಕರಣತ್ವಂ ಚ ಸ್ವಭಾವಶ್ಚೇತನಾ ಧೃತಿಃ । ಯತ್ಪ್ರಸಾದಿಮೇ ಸಂತಿ ನ ಸಂತಿ ಯದುಪೇಕ್ಷಯಾ ॥'–ಇತಿ ಪೈಂಗಿಶ್ರುತಿಃ (೨.೩.೪೦, ೪೧). ಜೀವನ ಪ್ರವೃತ್ತಿಯೂ ಬಂಧನಿವೃತ್ತಿಯೂ ಪರಮಾತ್ಮನಿಂದಲೇ ಆಗುತ್ತವೆ. ದೇಹಸಂಬಂಧ ಇರುವುದರಿಂದಲೂ ಅಪೂರ್ಣಶಕ್ತಿಯುಳ್ಳವನಾದ್ದರಿಂದಲೂ ಮತ್ಸ್ಯಾದಿಗಳಂತೆ ಜೀವನು ಸ್ವತಂತ್ರನಾಗಿ ವರ್ತಿಸಲಾರನು, 'ಅಂಶಾಶ್ಚ ದೇಹಯೋಗ್ಯತ್ವಾಜ್ಜೀವಾ ಬಂಧಾದಿ ಸಂಯುತಾಃ । ಅನುಗ್ರಾಹ್ಯಾಶ್ಚೇಶ್ವರೇಣ ನ ತು ಮತ್ಸ್ಯಾದಿಕೋ ಹರಿಃ ॥ –ಇತಿ ವಾರಾಹೇ, ಅಥಾವರಾ ಸರ್ವ ಏವಾಪೂರ್ಣಾಃ ಸರ್ವ ಏವ ಬಧ್ಯಂತೇಽಥ ಮುಚ್ಯಂತೇ ಚ ಕೇಚನ । ಇತಿ–ಚತುರ್ವೇದ ಶಿಖಾಯಾಂ' (೨.೩.೪೮, ೪೯), ಜೀವರ ಅನಾದಿಕರ್ಮದಂತೆ ಅವರನ್ನು ಪರಮಾತ್ಮ ಪ್ರೇರಿಸುತ್ತಾನೆ, ಆದ್ದರಿಂದ ಅವನಲ್ಲಿ ವೈಷಮ್ಯ ನೈರ್ಘೃಣ್ಯಾದಿ ದೋಷಗಳಿಲ್ಲ, 'ಪುಣ್ಯಾಪಾಪಾದಿಕಂ ವಿಷ್ಣುಃ ಕಾರಯೇತ್ಪೂರ್ವಕರ್ಮಣಾ । ಅನಾದಿತ್ವಾತ್ಕರ್ಮಣಶ್ಚ ನ ವಿರೋಧಃ ಕಥಂಚನ ॥ ಇತಿ ಭವಿಷ್ಯತ್ಪುರಾಣೇ' (೨.೧.೩೬).

ಜೀವನಿಗೆ ಕನಸು ಸಹ ಪರಮಾತ್ಮನಿಂದಲೇ ಉಂಟಾಗುತ್ತದೆ, 'ಓಂ ಸಂಧ್ಯೇ ಸೃಷ್ಟಿರಾಹ ಹಿ ಓಂ' (೩.೨.೧). ಮತ್ತು ಪರಮಾತ್ಮನೇ ಜೀವನ ಮನಸ್ಸಿನ ಸಂಸ್ಕಾರಗಳನ್ನು ಉಪಾದಾನ ಕಾರಣಮಾಡಿಕೊಂಡು ಕನಸ್ಸಿನಲ್ಲಿ ಪದಾರ್ಥಗಳನ್ನು ಸೃಷ್ಟಿಮಾಡುತ್ತಾನೆ, 'ಅನಾದಿ ಮನೋಗತಾನ್ ಸಂಸ್ಕಾರಾನ್ ಸ್ವೇಚ್ಛಾಯಾ ಪರಮೇಶ್ವರಃ । ಪ್ರದರ್ಶಯತಿ ಜೀವಾಯ ಸ ಸ್ವಪ್ನ ಇತಿ ಗೀಯತೇ ॥ ಇತಿ–ಬ್ರಹ್ಮಾಂಡೇ' (೩.೨.೩). ಕನಸು ಅಸತ್ಯವಲ್ಲ ಏಕೆಂದರೆ ಅದು ಶುಭಾಶುಭ ಸೂಚಕವಾಗಿದೆ. ಆದರೆ ಅದನ್ನು ಎಚ್ಚರವೆಂದು ತಿಳಿಯುವುದು ಮಾತ್ರ ಭ್ರಾಂತಿಯಾಗಿರುತ್ತದೆ, 'ಓಂ ಸೂಚಕಶ್ಚ ಹಿ ಶ್ರುತೇರಾಚಕ್ಷತೇ ಚ ತದ್ವಿದಃ ಓಂ' (೩.೨.೪). ಜಾಗ್ರತ್ ಮತ್ತು ಸ್ವಪ್ನಗಳನ್ನು ತೋರಿಸುವವನೂ ಮತ್ತು ಅವನ್ನು ತಿರೋಧಾನಮಾಡುವವನೂ ಪರಮಾತ್ಮನೇ ಆಗಿದ್ದಾನೆ, 'ಸ್ವಪ್ನಾದಿ ಬುದ್ಧಿಕರ್ತಾ ಚ ತಿರಸ್ಕರ್ತಾ ಸ ಏವ ಚ । ತದಿಚ್ಛಯಾ ಯತೋಹ್ಯಸ್ಯ ಬಂಧಮೋಕ್ಷೌ ಪ್ರತಿಷ್ಠಿತೌ ॥ ಇತಿ–ಕೌರ್ಮೇ' (೩.೨.೫, ೬). ಜೀವನು

ಗಾಢನಿದ್ರೆಯಲ್ಲಿ ನಾಡಿಯಲ್ಲಿರುವ ಪರಮಾತ್ಮನನ್ನು ಸೇರುತ್ತಾನೆ. ಅಲ್ಲಿಂದ ಮತ್ತೆ ಜಾಗ್ರದವಸ್ಥೆಯೂ ಪರಮಾತ್ಮನಿಂದಲೇ ಆಗುತ್ತದೆ. ಮೂರ್ಛಾವಸ್ಥೆಯಲ್ಲಿ ಪರಮಾತನಲ್ಲಿ ಅರ್ಧಮಟ್ಟಿಗೆ ಸೇರಿರುತ್ತಾನೆ, 'ಏಷ ಸ್ವಪ್ನಾನ್ ದರ್ಶಯತ್ಯೇಷ ಪ್ರಭೋಧಯತ್ಯೇಷ ಏವ ಪರಮ ಆನಂದಃ । ಓಂ ಮುಗ್ಧೇऽರ್ಧಸಂಪತ್ತಿಃ ಪರಿಶೇಷಾತ್ ಓಂ' (೩.೨.೭.೮,೯) ಸೇರಿರುತ್ತಾನೆ. ಪರಮಾತ್ಮನು ಯಾವ ಅವಸ್ಥೆಯಲ್ಲಿ ಯಾವ ಸ್ಥಳದಲ್ಲಿದ್ದರೂ ಅವನಲ್ಲಿ ಯಾವ ವಿಧವಾದ ಭೇದವೂ ಇಲ್ಲ, 'ಏಕರೂಪಃ ಪರೋ ವಿಷ್ಣುಃ ಸರ್ವತ್ರಾಪಿ ನ ಸಂಶಯಃ। ಐಶ್ವರ್ಯವದ್ರೂಪಮೇಕಂ ಚ ಸೂರ್ಯವದ್ಬಹುಧೇಯತೇ ॥ ಇತಿ–ಮಾತ್ಸ್ಯೇ' (೩.೨.೧೧).

ಜೀವರಲ್ಲಿರುವ ವೈಚಿತ್ರ್ಯಕ್ಕೆ ಅವರ ಅನಾದಿಯಾದ ಜ್ಞಾನ ಮತ್ತು ಕರ್ಮಗಳೇ ಕಾರಣವಾಗಿವೆ, "ಅನಾದಿ ವಿದ್ಯಾಕರ್ಮಾದಿ ವೈಚಿತ್ರ್ಯಾದ್ವೈಚಿತ್ರ್ಯಂ" (೨.೩.೫೧). ಜೀವರಲ್ಲಿ ಮುಕ್ತಿಯೋಗ್ಯರು, ನಿತ್ಯಸಂಸಾರಿಗಳು ಮತ್ತು ತಮೋಯೋಗ್ಯರು ಎಂದು ಮೂರು ವಿಧ. ಅವರು ತಮ್ಮ ತಮ್ಮ ಜ್ಞಾನ ಕರ್ಮಗಳಿಗೆ ಅನುಗುಣವಾಗಿ ಸಾಧನೆಗಳನ್ನು ಮಾಡಿ ಲೋಕಾಂತರಗಳಲ್ಲಿ ಫಲವನ್ನು ಅನುಭವಿಸಿ ಮತ್ತೆ ಹುಟ್ಟುತ್ತಾರೆ. ಪರಮಾತ್ಮನ ದ್ವೇಷಿಗಳು ತಾಮಿಸ್ರ, ಅಂಧತಾಮಿಸ್ರ ಎಂಬ ನಿತ್ಯ ನರಕಗಳಿಗೆ ಹೋಗುತ್ತಾರೆ, 'ತದ್ಯ ಇಹ ಶುಭಕೃತೋ ಯೇ ಚಾಶುಭಕೃತಸ್ತೇ ಶುಭಮನುಭೂಯಾವರ್ತಂತೇ ಪುನಃ ಕರ್ಮಕುರ್ವಂತಿ ಪುನರ್ಗಚ್ಛಂತಿ ಪುನರಾಗಚ್ಛಂತಿ॥–ಇತಿ ಭಾಲ್ಲವೇಯಶ್ರುತಿಃ, ರೌರವೋಥ ಮಹಾಂಶ್ಚೈವ ವಹ್ನಿರ್ವೈತರಣೀ ತಥಾ । ಕುಂಭೀಪಾಕ ಇತಿ ಪ್ರೋಕ್ತಾನ್ಯನಿತ್ಯನರಕಾಣಿ ತು । ತಮಿಸ್ರಶ್ಚಾಂಧತಮಿಸ್ರೋ ದ್ವೌ ನಿತ್ಯಸಂಪ್ರಕೀರ್ತಿತೌ ।' (೩.೧.೧೩). ಅಲ್ಲಿ ಕೇವಲ ದುಃಖವೇ ಇರುತ್ತದೆ, 'ನ ಸುಖಾನುವೃತ್ತೇ ನ ತಮಃ ಸುಖಾನುವೃತ್ತಂ ಕೇವಲಂ ಹ್ಯೇವಾತ್ರ ದುಃಖಂ ಭವತಿ।–ಇತಿ' ಶ್ರುತಿಃ (೩.೧.೧೯). ಪರಮಾತ್ಮನು ನರಕದಲ್ಲಿದ್ದು ಜೀವರ ಯೋಗ್ಯತೆಗೆ ತಕ್ಕ ಫಲವನ್ನು ಕೊಡುತ್ತಾನಾದರೂ ಅವನಿಗೆ ನರಕ ದುಃಖವಿಲ್ಲ, 'ನರಕೇऽಪಿ ವಸನ್ನೀಶೋ ನಾಸೌ ದುಃಖಭುಗುಚ್ಯತೇ । ನೀಚೋಚ್ಚತ್ವೈವ ದುಃಖಾದೇರ್ಭೋಗ ಇತ್ಯಭಿಧೀಯತೇ । ನಾಸೌ ನೀಚೋಚ್ಚತಾಂ ಯಾತಿ ಪಶ್ಯತ್ಯೇವ ಪ್ರಭುತ್ವತಃ ॥–ಇತಿ ಭಾಗವತತಂತ್ರೇ' (೩.೧.೧೭)

ಮುಕ್ತಿ ಎಂದರೆ ಜೀವನು ತನ್ನ ಸ್ವರೂಪ ಸುಖವನ್ನು ಅನುಭವಿಸುವುದೇ ಆಗಿದೆ. ಜೀವನ ಜ್ಞಾನಾನಂದಾದಿಗಳು ಮೊದಲು ಅವ್ಯಕ್ತವಾಗಿದ್ದು, ಯೌವನವು ಬರುತ್ತಲೇ ಪುರುಷತ್ವವು ವ್ಯಕ್ತವಾಗುವಂತೆ, ಪರಮಾತ್ಮನ ಅನುಗ್ರಹದಿಂದ ವ್ಯಕ್ತವಾಗುತ್ತದೆ. 'ಬಲಮಾನಂದ ಓಜಶ್ಚ ಸಹೋ ಜ್ಞಾನಮನಾಕುಲಂ । ಸ್ವರೂಪಾಣ್ಯೇವ ಜೀವಸ್ಯ ವ್ಯಜ್ಯಂತೇ ಪರಮಾದ್ವಿಭೋಃ ॥ ಇತಿ ಗೌಪವನಶ್ರುತಿಃ' (೨.೩.೩೧) ದೇವತೆಗಳಲ್ಲಿ ಅದು ನಿತ್ಯ ವ್ಯಕ್ತವಾಗಿರುತ್ತದೆ, ಅಸುರರಿಗೆ ಯಾವಾಗಲೂ ವ್ಯಕ್ತವಾಗುವುದಿಲ್ಲ, ಮನುಷ್ಯರಿಗಾದರೋ ಮೊದಲು ವ್ಯಕ್ತವಾಗದೆ ಇದ್ದು ನಚಿತರದಲ್ಲಿ ಪರಮಾತ್ಮನ ಅನುಗ್ರಹದಿಂದ ತೋರುತ್ತದೆ. 'ನಿತ್ಯಾನಂದಜ್ಞಾನಬಲಾದೇವಾ

ನೈವಂ ತು ದಾನವಾಃ । ದುಃಖೋಪಲಬ್ಧಿಮಾತ್ರಾಸ್ತೇ ಮಾನುಷಾ ಸ್ತೂಭಯಾತ್ಮಕಾಃ ॥ ತೇಷಾಂ ಯದನ್ಯಥಾ ದೃಶ್ಯಂ ತದುಪಾಧಿಕೃತಂ ಮತಂ। ವಿಜ್ಞಾನೇನಾತ್ಮಯೋಗೇನ ನಿಜರೂಪೇವ್ಯವಸ್ಥಿತಿಃ ॥ – ಇತಿ ಭವಿಷ್ಯತ್ಪರ್ವಣಿ' (೨.೩.೩೨) ಮುಕ್ತಿಗೆ ಕಾರಣವಾದ ಪರಮಾತ್ಮನ ಅತ್ಯರ್ಥಪ್ರಸಾದವು ಭಕ್ತಿಯಿಂದಲೇ ಆಗುತ್ತದೆ, 'ಮಹಿತ್ವಬುದ್ಧಿರ್ಭಕ್ತಿಸ್ತು ಸ್ನೇಹಪೂರ್ವಾಭಿಧೀಯತೇ । ತಯ್ಯೈವ ವ್ಯಜ್ಯತೇ ಸಮ್ಯಗ್ಜೀವರೂಪಂ ಸುಖಾದಿಕಂ ॥ ಇತಿ ಪಾದ್ಮೇ' (೩.೨.೧೯). ಭಕ್ತಿಜ್ಞಾನಾದಿಗಳಲ್ಲಿ ತಾರತಮ್ಯವಿರುವುದರಿಂದ, ಮುಕ್ತಿಯಲ್ಲಿ ವ್ಯಕ್ತವಾಗುವ ಆನಂದದಲ್ಲಿ ತಾರತಮ್ಯವಿರುತ್ತದೆ, "ಯಥಾ ಭಕ್ತಿ ವಿಶೇಷೋಽತ್ರ ದೃಶ್ಯತೇ ಪುರುಷೋತ್ತಮೇ । ತಥಾ ಮುಕ್ತಿವಿಶೇಷೋಽಪಿ ಜ್ಞಾನಿನಾಂ ಲಿಂಗಭೇದನೇ ಇತಿ ॥ ಇತಿ ಸ್ಮೃತಿಃ" (೩.೨.೨೦,೨೧). ಪರಮಾತ್ಮನ ಅಪರೋಕ್ಷವಿಲ್ಲದೆ ಅವನಲ್ಲಿ ಜೀವರ ಯೋಗ್ಯತೆಗೆ ತಕ್ಕ ಭಕ್ತಿ ಉಂಟಾಗಲಾರದು. ಅಪರೋಕ್ಷವೂ ಸಹ ಪರಮಾತ್ಮನ ಅನುಗ್ರಹದಿಂದಲೇ ಹೊರತು ಕೇವಲ ಜೀವನ ಪ್ರಯತ್ನದಿಂದ ಲಭ್ಯವಾಗುವುದಿಲ್ಲ, "ನಿತ್ಯಾವ್ಯಕ್ತೋಽಪಿ ಭಗವಾನೀಕ್ಷತೇ ನಿಜ ಶಕ್ತಿತಃ । ತಮೃತೇ ಪರಮಾತ್ಮಾನಂ ಕಃ ಪಶ್ಯೇತಾಮಿತಂ ಪ್ರಭುಂ ॥ ಇತಿ ನಾರಾಯಣಾಧ್ಯಾತ್ಮೇ" (೩.೨.೨೩, ೨೪). ಪರಮಾತ್ಮನು ಅವ್ಯಕ್ತನೇ ಆದರೂ ಜೀವರ ಶ್ರವಣಮನನಾದಿ ಸಾಧನೆಗಳನ್ನು ನೋಡಿ, ಅನಂತಶಕ್ತಿಯುತನಾದ ಅವನು ಕರುಣೆಯಿಂದ ತನ್ನ ದರ್ಶವನ್ನು ಕೊಡುತ್ತಾನೆ (೩.೨.೨೬, ೨೭). ಶ್ರವಣಮನನಾದಿಗಳು ಯೋಗ್ಯರಾದ ಗುರುಗಳಿಂದ ದತ್ತವಾಗಿರಬೇಕು. ಅವುಗಳಿಂದ ಅಜ್ಞಾನ ವಿಪರ್ಯಯಗಳು ನಿವೃತ್ತಿಯಾ ಗುತ್ತವೆ, "ಆಚಾರ್ಯಾದ್ಧ್ಯೇವ ವಿದ್ಯಾ ವಿದಿತಾ ಸಾಧಿಷ್ಟಂ ಪ್ರಾಪಯತಿ ।" (ಛಾಂ. ಉ. ೪.೯.೩), "ಗುರುಪ್ರಸಾದೋ ಬಲವಾನ್ ನ ತಸ್ಮಾದ್ಬಲವತ್ತರಂ । ತಥಾಪಿ ಶ್ರವಣಾದಿಶ್ಚ ಕರ್ತವ್ಯೋ ಮೋಕ್ಷ ಸಿದ್ಧಯೇ ॥ ಇತಿ ವಾರಾಹೇ" (೩.೩.೪೩, ೪೪).

ಬ್ರಹ್ಮದೇವರು ಸರ್ವಗುಣಪೂರ್ಣನೆಂದು ಪರಮಾತ್ಮನ್ನು ಉಪಸನೆಮಾಡುವುದರಿಂದ ಅವರಿಗೆ ಸಂಪೂರ್ಣವಾದ ಆನಂದವು ಮುಕ್ತಿಯಲ್ಲಿ ಲಭ್ಯವಾಗುತ್ತದೆ. ಉಳಿದ ಜೀವರಿಗೆ ಅವರವರ ಯೋಗ್ಯತೆಯನ್ನು ಅನುಸರಿಸಿ ಮೋಕ್ಷದಲ್ಲಿ ಪರಮಾತ್ಮನ ಅನುಗ್ರಹದಿಂದ ಆನಂದೋದ್ರೇಕವಾಗುತ್ತದೆ, "ಸಂಪೂರ್ಣೋಪಾಸನಾದ್ಬ್ರಹ್ಮಾ ಸಂಪ್ರರ್ಣಾನಂದಭಾಗ್ಭವೇತ್ । ಇತರೇ ತು ಯಥಾಯೋಗ್ಯಂ ಸಮ್ಯಕ್ ಮುಕ್ತೌ ಭವಂತಿ ಹಿ ॥ ಇತಿ ಪಾದ್ಮೇ" (೩.೩.೧೧). ಎಲ್ಲ ಮುಮುಕ್ಷುಗಳೂ ಸತ್ ಚಿತ್, ಆನಂದ ಮತ್ತು ಆತ್ಮ ಎಂದು ನಾಲಕ್ಕು ಗುಣಗಳನ್ನು ಉಪಾಸನೆಮಾಡಲೇಬೇಕು., "ಸಚ್ಚಿದಾನಂದ ಆತ್ಮೇತಿ ಬ್ರಹ್ಮೋಪಾಸಾ ವಿನಿಶ್ಚಿತಾ । ಸರ್ವೇಷಾಂ ಚ ಮುಮುಕ್ಷೂಣಾಂ ಫಲಸಾಮ್ಯಾಪೇಕ್ಷಿತಾ ॥ ಇತಿ ಬ್ರಹ್ಮತರ್ಕೇ" (೩.೩.೧೨). ಮುಕ್ತಿಯಲ್ಲಿ ಜೀವರ ಯೋಗ್ಯತೆಯನ್ನು ಅನುಸರಿಸಿ ಆನಂದದಲ್ಲಿ ತಾರತಮ್ಯವಿರುತ್ತದೆ, "ಮನುಷ್ಯೇಭ್ಯೋ ಗಂಧರ್ವಾಣಾಂ ಗಂಧರ್ವೇಭ್ಯ ಋಷೀಣಾಂಮೃ ಷಿಭ್ಯೋ ದೇವಾನಾಂ ದೇವೇಭ್ಯ ಇಂದ್ರಸ್ಯ

ಇಂದ್ರಾದ್ರುದ್ರಸ್ಯ ರುದ್ರಾದ್ಬ್ರಹ್ಮಣ ಏಷ ಹ್ಯೇವ ಶತಾನಂದಃ ॥ ಇತಿ ಚತುರ್ವೇದಶಿಖಾಯಾಂ" (೩.೩.೩೩). ಆದರೆ ಮುಕ್ತರಲ್ಲಿ ಪರಸ್ಪರ ವಿರೋಧವಿರುವುದಿಲ್ಲ, "ನಾನಾವಿಧಾ ಜೀವಸಂಘಾ ವಿಮುಕ್ತೌ ನ ಚೈವ ತೇಷಾಂ ಬ್ರಹ್ಮಧಿಯಾಂ ವಿರೋಧಃ । ದೋಷಾಭಾವಾದ್ಗುರುಶಿಷ್ಯಾದಿಭಾವಾಲ್ಲೋಕೇ$ಪಿ ನಾಸೌ ಕಿಮು ತೇಷಾಂ ವಿಮುಕ್ತೇಃ ॥ ಇತಿ ತುರಶ್ರುತೌ" (೩.೩.೩೪). ಮುಕ್ತರೂ ಸಹ ಸ್ವೇಚ್ಛೆಯಿಂದಲೇ ಕರ್ಮಗಳನ್ನು ಮಾಡುತ್ತಾರೆ. "ಮುಕ್ತಾ ಅಪಿ ಹಿ ಕುರ್ವಂತಿ ಸ್ವೇಚ್ಛಯೋಪಾಸನಂ ಹರೇಃ । ನಿಯಮಾನಚಿತರಂ ವಿಪ್ರಾಃ ಕುಶಾದ್ಯೈರಪ್ಯಧೀಯತೇ ॥ ಇತಿ ಬ್ರಹ್ಮತರ್ಕೇ" (೩.೩.೨೭, ೨೮). ಆದರೆ ಈ ವಿಧವಾದ ಉಪಾಸನೆ ಕೇವಲ ಆನಂದರೂಪವಾಗಿರುತ್ತದೆ ಸಾಧನರೂಪವಾಗಿರುವುದಿಲ್ಲ. ರಮಾದೇವಿ ನಿತ್ಯಮುಕ್ತಳಾದರೂ ಸ್ವೇಚ್ಛೆಯಿಂದಲೇ ಉಪಾಸನಾದಿಗಳನ್ನು ಮಾಡುತ್ತಾಳೆ. "ಯಥಾ ಶ್ರೀರ್ನಿತ್ಯಮುಕ್ತಾ$ಪಿ ಪ್ರಾಪ್ತಕಾಮಾ$ಪಿ ಸರ್ವದಾ । ಉಪಾಸ್ತೇ ನಿತ್ಯಶೋ ವಿಷ್ಣುಮೇವಂ ಭಕ್ತೋ ಹರೇರ್ಭವೇತ್ ॥ ಇತಿ ಬೃಹತ್ತಂತ್ರೇ" (೩.೩.೪೧).

ಜೀವರು ಪ್ರಾರಬ್ಧಕರ್ಮ ಮುಗಿದ ನಂತರ ಅರ್ಚಿರಾದಿ ಮಾರ್ಗದಿಂದ ಹೋಗಿ ಮುಕ್ತಿಯನ್ನು ಪಡೆದು ಕೇವಲ ಜ್ಞಾನಾನಂದಾತ್ಮಕವಾದ ದೇಹವನ್ನೂ ಇಂದ್ರಿಯಗಳನ್ನೂ ಪಡೆದು ಪರಮಾತ್ಮನಲ್ಲಿ ಪ್ರವೇಶಮಾಡಿ ತಮ್ಮ ಸ್ವರೂಪಭೂತವಾದ ಅವಯವಗಳಿಂದ ಪ್ರವರ್ತಿಸುತ್ತಾ ಭೋಗಗಳನ್ನು ಅನುಭವಿಸುತ್ತಾರೆ, "ಮರ್ತ್ಯಂ ದೇಹಂ ಪರಿತ್ಯಜ್ಯ ಚಿತಿಮಾತ್ರಾತ್ಮ ದೇಹಿನಃ । ಚಿತಿಮಾತ್ರೇಂದ್ರಿಯಾಶ್ಚೈವ ಪ್ರವಿಷ್ಟಾ ವಿಷ್ಣುಮವ್ಯಯಂ ತದಂಗಾನುಗೃಹೀತೈಶ್ಚ ಸ್ವಾಂಗೈರೇವ ಪ್ರವರ್ತನಂ । ಕುರ್ವಂತಿ ಭುಂಜತೇ ಭೋಗಾಂಸ್ತದಂತರ್ಬಹಿರೇವ ವಾ । ಯಥೇಷ್ಟಂ ಪರಿವರ್ತಂತೇ ತಸ್ಯೈವಾನುಗ್ರಹೇರಿತಾಃ ॥ ಇತಿ ನಾರಾಯಣಾಧ್ಯಾತ್ಮೇ (೪.೪.೭). ಮುಕ್ತರು ತಮಗಿಂತ ಉತ್ತಮರಾದವರನ್ನು ಹೊರತು ಅಧಮರಿಂದ ನಿಯಮ್ಯರಾಗಿರುವುದಿಲ್ಲ, "ಪರಮೋ$ಧಿಪತಿಸ್ತೇಷಾಂ ವಿಷ್ಣುರೇವ ನ ಸಂಶಯಃ । ಬ್ರಹ್ಮಾದಿ ಮಾನುಷಾಂತಾನಾಂ ಸರ್ವೇಷಾಮವಿಶೇಷತಃ ॥ ತತಃ ಪ್ರಾಣಾದಿ ನಾಮಾಂತಾಃ ಸರ್ವೇ$ಪಿ ಪತಯಃ ಕ್ರಮಾತ್ ॥ ಆಚಾರ್ಯಾಶ್ಚೈವ ಸರ್ವೇ$ಪಿ ಯೈರ್ಜ್ಞಾನಂ ಸುಪ್ರತಿಷ್ಠಿತಂ॥ ಏತೇಭ್ಯೋ$ನ್ಯಃ ಪತಿರ್ನೈವ ಮುಕ್ತಾನಾಂ ನಾತ್ರ ಸಂಶಯಃ ॥ ಇತಿ ವಾರಾಹೇ" (೪.೪.೯). ಮುಕ್ತರಿಗೆ ತಮ್ಮ ಇಚ್ಛಾನುಸಾರವಾಗಿ ಚಿನ್ಮಾತ್ರವಾದ ಶರೀರವೂ ಬಾಹ್ಯಶರೀರವೂ ಇರುತ್ತದೆ, "ಯಥಾ ದ್ವಾದಶಾಹಃ ಕ್ರತ್ವಾತ್ಮಕಃ ಸತ್ರಾತ್ಮಕಶ್ಚ ಭವತಿ । ಏವಂ ಮುಕ್ತಭೋಗೋ ಬಾಹ್ಯಶರೀರಕೃತಶ್ಚಿನ್ಮಾತ್ರಕೃತಶ್ಚ ಭವತಿ ॥" (೪.೪.೧೨). ಮುಕ್ತರು ಸೃಷ್ಟ್ಯಾದಿ ಭಗಂತನ ವ್ಯಾಪಾರಗಳನ್ನು ಹೊರತು ಮಿಕ್ಕ ವ್ಯಾಪಾರಗಳನ್ನು ತಮ್ಮ ಯೋಗ್ಯತೆಗೆ ಅನುಗುಣವಾಗಿ ನಡೆಸುತ್ತಾರೆ, "ಓಂ ಜಗದ್ವ್ಯಾಪಾರವರ್ಜ್ಯಂ ಓಂ" (೪.೪.೧೭). ಮುಕ್ತರ ಆನಂದವು ಸಾಧನಪ್ರಾಪ್ಯವಲ್ಲ. ವೃದ್ಧಿಹ್ರಾಸಗಳಿಲ್ಲದೇ ಏಕರೂಪವಾಗಿರುತ್ತದೆ, "ನ ಹ್ರಾಸೋ ನ ಚ

ವೃದ್ಧಿರ್ವಾ ಮುಕ್ತನಾಂ ವಿದ್ಯತೇ ಕ್ವಚಿತ್ । ವಿದ್ವತ್ ಪ್ರತ್ಯಕ್ಷಸಿದ್ಧತ್ವಾತ್ ಕಾರಣಾಭಾವತೋಽನುಮಾ ॥ ಹರೇರುಪಾಸನಾ ಚಾತ್ರ ಸದೈವ ಸುಖರೂಪಿಣೀ । ನ ತು ಸಾಧನಭೂತಾ ಸಾ ಸಿದ್ಧಿರೇವಾತ್ರ ಸಾ ಯತಃ ॥ ಇತಿ ಬ್ರಹ್ಮವೈವರ್ತೇ" (೪.೪.೨೧). ಆದರೆ ಆನಂದದಲ್ಲಿ ಭೋಗವೈಚಿತ್ರರೂಪವಾದ ವಿಶೇಷವಿರುತ್ತದೆ. "ಭೋಗಾನಾಂ ತು ವಿಶೇಷೇಷು ವೈಚಿತ್ರ್ಯಂ ಲಭ್ಯತೇ ಕ್ವಚಿತ್ ॥ ಇತಿ ನಾರಾಯಣತಂತ್ರೇ" (೪.೪.೨೨). ಮುಕ್ತರಾದವರು ಮತ್ತೆ ಎಂದೂ ಸಂಸಾರಕ್ಕೆ ತಿರುಗಿ ಬರುವುವೇ ಇಲ್ಲ, "ಓಂ ಅನಾವೃತ್ತಿಃ ಶಬ್ದಾದನಾವೃತ್ತಿಃ ಶಬ್ದಾತ್ ಓಂ"(೪.೪.೨೩), "ನ ಚ ಪುನರಾವರ್ತತೇ ನ ಚ ಪುನರಾವರ್ತತೇ (ಛಾಂ ೮.೧.೫.೧).

ಮಹಾನಂದತೀರ್ಥಸ್ಯ ಯೇ ಭಾಷ್ಯಭಾವಂ ಮನೋವಾಗ್ಭಿರಾವರ್ತಯಂತೇ ಸ್ವ ಶಕ್ತ್ಯಾ ।
ಸುರಾದ್ಯಾ ನರಾಂತಾ ಮುಕುಂದಪ್ರಸಾದಾದಿಮಂ ಮೋಕ್ಷಮೇತೇ ಭಜಂತೇ ಸದೇತಿ ॥
ಸುಮಧ್ವವಿಜಯ ಸರ್ಗ ೧೧

ಶ್ರೀಮದಾನಂದತೀರ್ಥರಿಂದ ರಚಿತವಾದ ಶಾಸ್ತ್ರವನ್ನು ಸಂಪ್ರದಾಯಜ್ಞರಾದ ಗುರುಗಳಿಂದ ಉಪದಿಷ್ಟರಾಗಿ ಪರಮಾತ್ಮನನ್ನು ಸರ್ವತ್ರ ಸರ್ವದಾ ಸರ್ವಾಕಾರ ಸರ್ವಾಧಾರ ಸರ್ವಾಶ್ರಯ ಸರ್ವೋತ್ಪಾದಕ ಸರ್ವಪಾಲಕ ಸರ್ವಸಂಹಾರಕ ಸರ್ವನಿಯಾಮಕ ಸರ್ವಪ್ರೇರಕ ಸರ್ವಪ್ರವರ್ತಕ ಸರ್ವನಿವರ್ತಕ ಯಥಾಯೋಗ್ಯಂ ಸರ್ವಜ್ಞಾಜಾಜ್ಞಾನಬಂಧಮೋಕ್ಷಪ್ರದ ಸರ್ವಶಬ್ದವಾಚ್ಯ ಸರ್ವಶಬ್ದಪ್ರವೃತ್ತಿನಿಮಿತ್ತ ಸರ್ವಗುಣಾತಿಪೂರ್ಣತಮ ಸರ್ವದೋಷಾತಿದೂರ ಸರ್ವಾಚಿಂತ್ಯ ಸರ್ವೋತ್ತಮ ಸರ್ವೇಶ್ವರ ಸರ್ವಾತ್ಯಂತವಿಲಕ್ಷಣ ಸ್ವಗತಭೇದವಿವರ್ಜಿತ ಎಂದು ಉಪಾಸನೆ ಮಾಡಿ, ಅವನ ಪ್ರಸಾದದಿಂದ ಸ್ವಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷವನ್ನು ಪಡೆಯುವುದೇ ಮುಮುಕ್ಷುಗಳ ಕರ್ತವ್ಯವಾಗಿದೆ.

'ಸ ಹಿ ಸರ್ವಮನೋವೃತ್ತಿ ಪ್ರೇರಕಃ ಸಮುದಾಹೃತಃ', ನಮ್ಮ ಇಷ್ಟದೇವರೂ ಕುಲದೇವರೂ ಆದ ಭಾರತೀರಮಣ ಮುಖ್ಯಪ್ರಾಣಾಂಣತರ್ಗತನಾದ ಕರಿಗಿರಿನಿವಾಸನಾದ ಶ್ರೀಲಕ್ಷ್ಮೀನರಸಿಂಹದೇವರೇ ಪ್ರೇರಣೆಮಾಡಿ ಸಕಲ ಸಾಧನಗಳನ್ನೂ ಕೊಟ್ಟು ಈ ಪ್ರಬಂಧದ ರಚನೆ ಮಾಡಿಸಿದ್ದಾನೆ, ಈ ಕಾರಣದಿಂದ ಈ ಪ್ರಬಂಧದ ರಚನೆಯಿಂದ ಲಭ್ಯವಾದ ಪುಣ್ಯವನ್ನು ನನ್ನ ಸ್ವರೂಪೋದ್ಧಾರಕಗುರುಗಳಾದ ಜನ್ಮದಾತರ ಹಾಗೂ ಶ್ರೀಮನ್ ಮಧ್ವಶಾಸ್ತ್ರದ ಜ್ಞಾನವನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಯಾರು ಯಾರಿಂದ ನಾನು ಪಡೆದಿದ್ದೇನೋ ಆ ಎಲ್ಲ ಗುರುಗಳ ಅಂತರ್ಯಾಮಿಯಾದ ನನ್ನ ಸರ್ವಮನೋವೃತ್ತಿಗಳಿಗೆ

ಪ್ರೇರಕನಾದ ಭಾರತೀರಮಣಮುಖ್ಯಪ್ರಾಣಾಂತರ್ಗತನಾದ ಶ್ರೀಕರಿಗಿರಿ ಲಕ್ಷ್ಮೀನರಸಿಂಹ ದೇವರ ಚರಣಾರವಿಂದಗಳಲ್ಲಿ ಭಕ್ತಿಪೂರ್ವಕವಾಗಿ ಸಮರ್ಪಿಸುತ್ತೇನೆ.

- ಸೂರ್ಯನಾರಾಯಣಾರ್ಯಹೃನ್ಮಂದಿರೋ ಕರಿಗಿರೀಶಃ ।
- ಪ್ರೀಣೀತಾದನಯಾ ಕೃತ್ಯಾ ಭಕ್ತ್ಯಾ ಮದ್ವಪ್ರಣೀತಯಾ ॥
- ಮದಾರ್ಯಸುಮನೋಧಾಮ ಮಧ್ವಮಾನಸಮಂಚಕೇ ।
- ಶಯಾನಃ ಕರಿಗಿರೀಶಃ ಪ್ರೀಯತಾಂ ಸೇವಯಾನಯಾ ॥

ನ ವಿದ್ಯಾಮದತೋ ನಾಪಿ ಪ್ರತಿಷ್ಠಾಕಾಮತಃ ಕ್ವಚಿತ್ ।

- ಕಿಂತು ಶ್ರೀಹರಿಪಾದಾಬ್ಜರತಿಃಸ್ಯಾದಿತ್ಯಯಂ ಶ್ರಮಃ ॥
- ಭಕ್ತಿಃಸ್ಯಾತ್ ತ್ವಯಿ ಗೋವಿಂದ ತೃಪ್ತಿಃಸ್ಯಾತ್ ತ್ವನ್ನಿಷೇವಯಾ ।
- ತ್ವತ್ತೋ ಅನ್ಯತ್ರ ವಿರಕ್ತಿಃಸ್ಯಾತ್ ಮುಕ್ತಿಃಸ್ಯಾತ್ ಮುಕುಂದ ಮೇ ॥
- ಅಸ್ಮಿನ್ ಭವೇ ಭವೇ$ನ್ಯಸ್ಮಿನ್ ಭವಾಂತೇ ಚ ಭವಾಮ ತೇ।
- ದಾಸಾನುದಾಸಾಃ ಶ್ರೀನಾಥ ತ್ರಾತಾ ತ್ವಂ ನಃ ಸದಾ ಭವ ॥
- ಅಕ್ಷಯಂ ಕರ್ಮ ಯಸ್ಮಿನ್ ಪರೇ ಸ್ವರ್ಪಿತಂ ಪ್ರಕ್ಷಯಂ ಯಾಂತಿ ದುಃಖಾನಿ ಯನ್ನಾಮತಃ
- ಅಕ್ಷರೋ ಯೋ$ಜರಃ ಸರ್ವದೈವಾಮೃತಂ ಕುಕ್ಷಿಗಂ ಯಸ್ಯ ವಿಶ್ವಂ ಸದಾಜಾದಿಕಂ॥
- ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್॥
- ಆಚಾರ್ಯಾಃ ಶ್ರೀಮದಾರ್ಚಾಃ ಸಂತು ಮೇ ಜನ್ಮಜನ್ಮನಿ

ಶ್ರೀಕೃಷ್ಣಾರ್ಪಣಮಸ್ತು